18

# ಅದ್ಭುತಗಳ ಎರಡನೆಯ ಗುಂಪು

# (8:23-9:8)

ಮತ್ತಾಯ ಸುವಾರ್ತೆಯ 8:23-9:8 ಈ ಭಾಗಗಳು ಯೇಸುವಿನಿಂದ ಮಾಡಲ್ಪಟ್ಟಿರುವ ಇನ್ನೂ ಮೂರು ಅದ್ಭುತಗಳನ್ನು ಪ್ರಕಟಿಸುತ್ತದೆ. ಇವುಗಳಲ್ಲಿ ಬಿರುಗಾಳಿ ಶಾಂತಗೊಳಿಸಿದ್ದು ಒಳಗೊಂಡಿದೆ (8:23-27), ಇಬ್ಬರು ವ್ಯಕ್ತಿಗಳನ್ನು ದೆವ್ವಗಳಿಂದ ಬಿಡಿಸಿರುವದು (8:28-34), ಮತ್ತು ಪಾರ್ಶ್ವವಾಯು ರೋಗಿಯನ್ನು ವಾಸಿಮಾಡಿದ್ದು ಒಳಗೊಂಡಿದೆ (9:1-8). ಈ ಲೇಖನವು ಸೃಷ್ಟಿಯ ಮೇಲೆ ಯೇಸುವಿನ ಬಲವನ್ನು, ದುಷ್ಟ ಆತ್ಮನ ಬಲಗಳು, ಮತ್ತು ಶಾರೀರಿಕ ರೋಗಗಳ ಕುರಿತು ವಿವರಿಸುತ್ತದೆ. ಅವುಗಳು ನಂಬಿಕೆ ಮತ್ತು ಸಂಶಯ, ಸ್ವೀಕಾರ ಮತ್ತು ನಿರಾಕರಣೆ ಒಳಗೊಂಡಿರುತ್ತವೆ.

## ಬಿರುಗಾಳಿಯನ್ನು ಶಾಂತಗೊಳಿಸಿದ್ದು (8:23-27)

**23ಆತನು ದೋಣಿಯನ್ನು ಹತ್ತಿದಾಗ ಆತನ ಶಿಷ್ಯರು ಆತನ ಶಿಷ್ಯರು ಆತನ ಹಿಂದೆ ಹೋದರು. 24ಅವರು ಹೋಗುತ್ತಿರುವಾಗ ಸಮುದ್ರವು ಅಲ್ಲಕಲ್ಲೋಲವಾಗಿ ದೋಣಿಯು ತೆರೆಗಳಿಂದ ಮುಚ್ಚಿಹೋಯಿತು; ಆದರೆ ಆತನು ನಿದ್ದೆ ಹತ್ತಿ ಮಲಗಿದ್ದನು. 25ಅವರು ಹತ್ತರ ಬಂದು ಆತನನ್ನು ಎಚ್ಚರಿಸಿ - ಸ್ವಾಮೀ ಕಾಪಾಡು, ಸಾಯುತ್ತೇವೆ ಅನ್ನಲಾಗಿ ಆತನು ಅವರಿಗೆ - 26ಅಲ್ಪ ವಿಶ್ವಾಸಿಗಳೇ, ಯಾಕೆ ಧೈರ್ಯಗೆಡುತ್ತೀರಿ ಎಂದು ಹೇಳಿ ಎದ್ದು ಗಾಳಿಯನ್ನೂ ಸಮುದ್ರವನ್ನೂ ಗದರಿಸಿದನು; ಆಗ ಎಲ್ಲಾ ಶಾಂತವಾಯಿತು. 27ಆ ಜನರು ಬೆರಗಾಗಿ - ಈತನು ಎಂಥವನಾಗಿರಬಹುದು; ಗಾಳಿಯೂ ಸಮುದ್ರವು ಸಹ ಆತನು ಹೇಳಿದ ಹಾಗೆ ಕೇಳುತ್ತವಲ್ಲಾ ಅಂದರು.**

ದೃಶ್ಯವು ಸಮರ್ಪಣೆ ಇಲ್ಲದ ಹಿಂಬಾಲಕರಿಂದ (8:18-22) ಅಲ್ಪ ವಿಶ್ವಾಸದ ಕೊರತೆ ತೋರಿಸುವಂಥವರಿಗೆ ಬದಲಾಗಿದೆ (8:23-27). ಯೇಸು ಕೆಲವು ಸಾರಿ ಸಮರ್ಥವುಳ್ಳವರಿಂದ ಅನುಸಂದಾನ ಹೊಂದಿದನು ಮತ್ತು ಅಲ್ಲಿರುವವರಿಂದ ನಿರಾಶೆಯನ್ನು ಹೊಂದಿದನು.

**ವಚನ 23.** ಸಾಯಂಕಾಲವಾದಾಗ ಅಂತಿಮವಾಗಿ ಆತನು **ದೋಣಿಯನ್ನು** ಹತ್ತಿದಾಗ ಸಮುದ್ರದ ಆಚೆದಡಕ್ಕೆ ಹೋಗಲು ಕೇಳಿಕೊಂಡನು. ಆತನೊಂದಿಗೆ ಹನ್ನೆರಡು ಜನರಲ್ಲಿ ಕೆಲವರು ಆತನೊಂದಿಗೆ ಇದ್ದಾರೆ. ಇನ್ನೂ ಇತರೆ **ಶಿಷ್ಯರು ಆತನ ಹಿಂದೆ** ಇನ್ನೊಂದು ದೋಣಿ ಯಲ್ಲಿ ಇದ್ದಾರೆ (ಮಾರ್ಕ 4:36).

**ವಚನ 24.** ಯೇಸು ಮತ್ತು ಹಿಂಬಾಲಕರು ಪ್ರಯಾಣ ಮಾಡುತ್ತಿರುವ **ಸಮುದ್ರವು ಅಲ್ಲಕಲ್ಲೋಲವಾಗಿ ದೋಣಿಯು ತೆರೆಗಳಿಂದ ಮುಚ್ಚಿಹೋಯಿತು;** ಗಲಿಲಾಯ ಸಮುದ್ರಕ್ಕೆ ಸಂಬಂಧಪಟ್ಟಂತೆಯೇ Robert H. Mounce ಅವರು ವಿವರಿಸಿದ್ದಾರೆ,

> ಪೇರು ಹಣ್ಣಿನ ಆಕಾರದ ಕೆರೆ (ಎಂಟು ಮೈಲುಗಳು ಅಗಲವಿದೆ ಮತ್ತು ಹದಿಮೂರ ಮೈಲುಗಳು ಉತ್ತರದಿಂದ ದಕ್ಷಿಣಕ್ಕೆ ಇದೆ) 680 ಅಡಿ ಸಮುದ್ರ ಮಟ್ಟಕ್ಕಿಂತ ಕೆಳಗಡೆ ಇದೆ. ಎತ್ತರದ ಬೆಟ್ಟಗಳು ಅದನ್ನು ಸುತ್ತುವರಿದಿವೆ ಆಳವಾದ ಕಣಿವೆಯಿಂದ ಕತ್ತರಿಸಿದಂತೆ ಬಾಸವಾಗುತ್ತದೆ ಆಳಿಸಿ (ಲಾಅಸಿ) ಆಕಾರದಂತೆ, ನರ್ತಿಸಿ ಜೋರಾದ

> ಗಾಳಿಯು ಕೆರೆಯ ಮೇಲೆ ಯಾವುದೇ ಮುನ್ನೆಚ್ಚರಿತೆ ಇಲ್ಲದೆ ಮೇಲಿ ನಿಂದ ಕೆಳಗೆ ಬೀಸುತ್ತದೆ.[1]

ಬೆಟ್ಟಗಳ ಮೇಲೆ ತಂಪಾದ ಗಾಳಿ ಬೀಸುವಾಗ ಅದು ಗಲಿಲಾಯ ಪ್ರಾಂತದ ಬಿಸಿಗಾಳಿಯನ್ನು ಸಂದರ್ಶಿಸುತ್ತದೆ. ಈ ಭಯಂಕರವಾದ ಗಾಳಿ ಮಾದರಿಯು ಯಾಕೆ ಈ ಗ್ರೀಕ್ ಶಬ್ದ *seismos*, "ಬಿರುಗಾಳಿ" ಎಂದು ಅನುವಾದಿಸಲಾಗಿದೆ. ಅದನ್ನು ಈ ವಚನದಲ್ಲಿ ಉಪಯೋಗಿ ಸಲಾಗಿ ಎನ್ನುವದು ವಿವರಿಸುತ್ತದೆ; ಈ ಪದವನ್ನು ಸಾಮಾನ್ಯವಾಗಿ "ಭೂಕಂಪನ"ವಾದಾಗ ಹೇಳುವಂಥದ್ದಾಗಿದೆ (24:7; 27:54; 28:2; ಅಪೊಸ್ತಲರ ಕೃತ್ಯಗಳು 16:26; ಪ್ರಕಟಣೆ 6:12; 8:5; 11:13, 19; 16: 18). ಇಂಥಹ ಗಾಳಿಯು ತಕ್ಷಣ ಭಯಂಕರವಾದ ರೌದ್ರತೆಯನ್ನು ತಾಳಬಹುದು (ನೋಡಿರಿ 14:24).

ಮೀನು ಹಿಡಿಯುವ **ದೋಣಿಯು** (*ploion*) **ತೆರೆಗಳಿಂದ ಮುಚ್ಚಿಹೋಯಿತು.** ಮಾರ್ಕನು ಈ ರೀತಿಯಾಗಿ ದಾಖಲಿಸಿದ್ದಾನೆ, "ದೊಡ್ಡ ಬಿರುಗಾಳಿ ಎದ್ದು ತೆರೆಗಳು ಆ ದೋಣಿಗೆ ಬಡಿದು ಒಳಗೆ ನುಗ್ಗಿದ್ದರಿಂದ ಆ ದೋಣಿ ಆಗಲೇ ತುಂಬುವದಕ್ಕೆ ಬಂದಿತ್ತು" (ಮಾರ್ಕ 4:37). ತೆರೆಗಳು ದೋಣಿಯಲ್ಲಿ ತುಂಬುತ್ತಾ ಇರುವಾಗ, **ಆತನು ನಿದ್ದೆ ಹತ್ತಿ ಮಲಗಿದ್ದನು.** ಭಯಂಕರವಾಗಿ ಬೀಸುವ ಗಾಳಿ ಇಲ್ಲವೆ ತೆರೆಗಳ ಬಡಿತವು ಆತನನ್ನು ಎಬ್ಬಿಸಿರಬಹುದು. ದೇವರ ವಾಕ್ಯದಲ್ಲಿ, ಗಾಢವಾದ ನಿದ್ರೆ ದೇವರಲ್ಲಿ ನಂಬಿಕೆಯನ್ನು ತೋರಿಸುತ್ತದೆ (ಯೋಬನು 11:18, 19; ಕೀರ್ತನೆ 3:5; 4:8; 127:2; ಜ್ಞಾನೋಕ್ತಿ 3:24-26; ಅಪೊಸ್ತಲರ ಕೃತ್ಯಗಳು 12:6, 7).

**ವಚನ 25.** ಯೇಸುವಿಗೆ ಭಿನ್ನವಾಗಿರುವ ಸಂಗತಿ ಇಲ್ಲಿದೆ. ಆತನು ಸಮಾಧಾನವಾಗಿ ನಿದ್ದೆ ಮಾಡುತ್ತಿದ್ದಾನೆ, ಆತನೊಂದಿಗೆ ಇದ್ದ ಶಿಷ್ಯರು ಭಯದಲ್ಲಿ ಇದ್ದಾರೆ. **ಅವರು ಹತ್ತಿರ ಬಂದು ಆತನನ್ನು ಎಬ್ಬಿಸಿ - ಸ್ವಾಮಿ ಕಾಪಾಡು ನಾವು ಸಾಯುತ್ತೇವೆ ಎಂದರು!** ಇನ್ನೊಂದು ಸಮಯದಲ್ಲಿ ಪೇತ್ರನು ನೀರಿನ ಮೇಲೆ ಯೇಸುವಿನ ಕಡೆಗೆ ನಡೆದು ಬರುತ್ತಿರುವಾಗ ಮುಳುಗಲು ಪ್ರಾರಂಭಿಸಿದನು, ಆತನು ಸಹ ಕೂಗಿ, "ಕರ್ತನೆ ನನ್ನನ್ನು ಕಾಪಾಡು!" ಅಂದನು (14:30).

**ವಚನ 26.** ಯೇಸು ಎದ್ದು ಅವರಿಗೆ ಗದರಿಸಿದನು, **ಅಲ್ಪವಿಶ್ವಾಸಿಗಳೇ, ಯಾಕೆ ಧೈರ್ಯಗೆಡುತ್ತೀರೀ?** ಎಂದನು. "ಧೈರ್ಯಗೆಡುತ್ತಿರಿ" ಎನ್ನುವದಕ್ಕೆ ಇಬ್ರಿಯಾ ಶಬ್ದ (*deilos*) ಇದರ ಅರ್ಥ. "ಅಂಜುಬುರುಕು," "ಹೇಡಿ," ಅಥವಾ "ಭಯಗ್ರಸ್ತ." ಈ ಶಿಷ್ಯರಿಗೆ "ಅಲ್ಪನಂಬಿಕೆ" ಇದೆ ಎಂದು ಯೇಸು ಹೇಳಿದನು "ಅಲ್ಪನಂಬಿಕೆಗೆ" ಗ್ರೀಕ್ ಪದ (*oligopistos*). ಇದು ಮತ್ತಾಯ ಮತ್ತು ಲೂಕ ಸುವಾರ್ತೆಯಲ್ಲಿ ಮಾತ್ರ ಕಾಣಿಸುತ್ತದೆ, ಇದನ್ನು ಯೇಸು ತನ್ನ ಶಿಷ್ಯರ ಕುರಿತಾಗಿ ವರ್ಣಿಸಲು ಮಾತ್ರ ಉಪಯೋಗಿಸಿದ್ದಾನೆ (ನೋಡಿರಿ 6:30ರ ಮೇಲಿರುವ ವ್ಯಾಖ್ಯಾನ ನೋಡಿರಿ). ಅವರು ನಿಜವಾಗಿಯೂ ಯೇಸು ಸೃಷ್ಠಿ ಕರ್ತನಾದ ದೇವರ ಮಗನು ಎಂದು ಅರ್ಥಮಾಡಿಕೊಳ್ಳುತ್ತಿದ್ದರು. ಯೇಸುವಿನ ಪ್ರಸನ್ನತೆಯ ಅರ್ಥ ಅದು ಅವರು ಸುರಕ್ಷಿತವಾಗಿ ಇರುತ್ತೇವೋ ಎಂದು ಅರ್ಥಮಾಡಿಕೊಂಡಿದ್ದರೋ? ದೇವರ ಉದ್ದೇಶವು ಸೃಷ್ಠಿ ಸೋಲಿಸಲಾರದು ಎಂದು ಅವರಿಗೆ ತಿಳಿದಿರಲಿಲ್ಲವೋ? "ಅವರು ತಮ್ಮ ಪ್ರಾರ್ಥನೆಯಿಂದ ಯೇಸುವಿಗೆ ತೊಂದರೆಕೊಟ್ಟದ್ದರಿಂದ ಅವರನ್ನು ಗದರಿಸಲಿಲ್ಲ, ಆದರೆ ತಮ್ಮನ್ನು ತಾವೇ ಭಯದಿಂದ ತೊಂದರೆ ಉಂಟುಮಾಡಿಕೊಂಡಿದ್ದಕ್ಕಾಗಿ" ಯೇಸು ಗದರಿಸಿದನು.[2] ಈ ಅಧ್ಯಾಯದಲ್ಲಿ ಅವರ "ಅಲ್ಪ ನಂಬಿಕೆ" ಮತ್ತು ಶತಾಧಿಪತಿಯ ಆಳು ಗುಣವಾಗಿರುವ "ದೊಡ್ಡ ನಂಬಿಕೆ"ಯ ಮಧ್ಯದಲ್ಲಿ ವ್ಯತ್ಯಾಸವು ಗಮನಿಸುವಂಥದ್ದಾಗಿದೆ (8:10).

ಯೇಸು ದೋಣಿಯಲ್ಲಿ **ಎದ್ದು ಗಾಳಿಯನ್ನು ಸಮುದ್ರವನ್ನು ಗದರಿಸಿದನು; ಆಗ ಎಲ್ಲಾ ಶಾಂತವಾಯಿತು.** ಈ ಪದ "ಗದರಿಸು" (*epitimaō*) ಸಾಮಾನ್ಯವಾಗಿ ಒಬ್ಬ ವ್ಯಕ್ತಿಯಿಂದ

ಇನ್ನೊಬ್ಬ ವ್ಯಕ್ತಿಗೆ ಕೊಡುವ ತಿದ್ದುವಿಕೆ ಅಥವಾ ಎಚ್ಚರಿಕೆ ಕೊಡುವದನ್ನು ಸೂಚಿಸುತ್ತದೆ. ಹಾಗಿದ್ದರೂ, ಯೇಸು ಈ ಅದ್ಭುತದಲ್ಲಿ ಈ ರೀತಿಯ ಪದ ಬಳಕೆ ಮಾಡಿರುವದು ನೋಡುವಾಗ ಅದು ಸಿಟ್ಟಿನಿಂದ ಕೂಡಿದ ಮುಕ್ತಾಯ ಸೂಚಿಸುತ್ತದೆ. ಆತನು ಗಾಳಿಯನ್ನು ಮಾತ್ರ "ಗದರಿಸಲಿಲ್ಲ," ಆತನು ಜ್ವರವನ್ನು (ಲೂಕ 4:39) ಮತ್ತು ದೆವ್ವವನ್ನು ಸಹ ಗದರಿಸಿದನು (ಲೂಕ 9:42).

ಮಾರ್ಕನು ಯೇಸು ಹೇಳಿರುವದನ್ನು ವರದಿ ಮಾಡಿದ್ದಾನೆ, "ಸುಮ್ಮನ್ನಿರು ಮೊರೆಯಬೇಡ" (ಮಾರ್ಕ 4:39). ಆಜ್ಞೆ "ಸುಮ್ಮನ್ನಿರು" ಇದಕ್ಕೆ ಗ್ರೀಕ್ ಶಬ್ದ *phimoō*. ತೆಗೆದುಕೊಂಡಿದ್ದು ಇದನ್ನು "ಪ್ರಾಣಿಯ ಬಾಯಿ" ಎಂದು ಸಹ ಅನುವಾದಿಸಲಾಗಿದೆ, ಆ ಆಲೋಚನೆಯಲ್ಲಿ, ಪ್ರಾಣಿಯ ಬಾಯಿಯನ್ನು ಒಬ್ಬರು ಕಟ್ಟಿದಂತೆಯೇ ಎಂದು ಹೇಳಿದಂತಾಗುತ್ತದೆ (1 ತಿಮೋಥೆ 5:18). ಗಾಳಿ ತಕ್ಷಣವೇ ಶಾಂತವಾಯಿತ್ತು D. A. Carson ರವರು ಬರೆದಿದ್ದಾರೆ,

> ... ಯೇಸುವಿನಲ್ಲಿ ರಾಜನ ಅಧಿಕಾರ ಮತ್ತು ಸೇವಕನ ಹೃದಯವೂ ಒಳಗೊಂಡಿದೆ ... ಯೇಸು ದೋಣಿಯಲ್ಲಿ ಮಲಗಿರುವನು, ತನ್ನ ಸೇವೆ. ಪ್ರಯಾಣದಿಂದ ದಣಿದಿದ್ದಾನೆ; ಆದರೂ ಆತನು ಕರ್ತನ ಸ್ವರೂಪ ಹೊಂದಿದ್ದಾನೆ, ತನ್ನ ಮಾತಿನಿಂದ ಗಾಳಿಯ ಬಾಯಿಯನ್ನು ಮುಚ್ಚಿದನು, ಆತನೇ ದೇವರ ಅಧಿಕಾರವನ್ನು ಪ್ರಯೋಗಿಸಿ ಸಮುದ್ರವನ್ನು ಅದಿನಕ್ಕೆ ತೆಗೆದುಕೊಂಡು ಶಾಂತಗೊಳಿಸಿದನು.[3]

**ವಚನ 27.** ಯೇಸುವಿನ ಅದ್ಭುತ ಕಾರ್ಯದ ನಿಮಿತ್ತ, ಶಿಷ್ಯರು **ಬೆರಗಾದರು.** "ಬೆರಗಾದರು" ಎನ್ನುವದಕ್ಕೆ ಗ್ರೀಕ್ ಶಬ್ದ (*thaumazō*), ಇದನ್ನು ಹೀಗೂ ಅನುವಾದಿಸಲಾಗಿದೆ. "ಆಶ್ಚರ್ಯಪಟ್ಟರು" (8:10), ಇದು ಇನ್ನು ಹೆಚ್ಚಿನ ಬೆರಗನ್ನು ಸೂಚಿಸುತ್ತದೆ. ಅವರ ಬೆರಗಿಗೆ ಸೇರಿಸಿ ಹೇಳುವಾಗ, ಅವರು ಸಹ "ಬಹಳ ಭಯಗೊಂಡರು" (ಮಾರ್ಕ 4:41). ಅವರು ಗಾಳಿಗಿಂತಲೂ ಯೇಸುವಿನ ಬಲಕ್ಕೆ ಹೆಚ್ಚಾಗಿ ಭಯಗೊಂಡರು. ಅವರು ಅನೇಕ ಆತನ ಅದ್ಭುತಗಳನ್ನು ನೋಡಿದ್ದರು, ಆದರೂ ಸೃಷ್ಟಿಯನ್ನೇ ಆ ದಿನಕ್ಕೆ ತರುವದನ್ನು ನೋಡಿ ಅವರು ಬೆರಗಾದರು. ಅವರು ಕೇಳಿದರು, "ಈತನು ಎಂಥವನಾಗಿರಬಹುದು ಗಾಳಿಯೂ ಮತ್ತು ಸಮುದ್ರವು ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ ಅಂದರು." ಇದಾದ ಮಲೆ, ಸಮುದ್ರದ ಸಿಟ್ಟಿನ ಮೇಲೆ ದೇವರ ಬಲವು ಮಾತ್ರ ಆದಿಪತ್ಯ ಹೊಂದಿದೆ (ಯೋಬ 38:8-11; ಕೀರ್ತನೆ 89:8, 9; 93:3, 4; 104:5-9; 106:9-12; 107: 23-29).

## ಇಬ್ಬರು ದೆವ್ವ ಹಿಡಿದವರನ್ನು ಬಿಡಿಸಿದ್ದು (8:28-34)

**28ಆ ಮೇಲೆ ಆತನು ಆಚೆದಡಕ್ಕೆ ಗದರೇನರ ಸೀಮೆಗೆ ಮುಟ್ಟಿದಾಗ ದೆವ್ವಹಿಡಿದವರಿಬ್ಬರು ಸಮಾಧಿಯ ಗವಿಗಳೊಳಗಿಂದ ಹೊರಟು ಆತನೆದುರಿಗೆ ಬಂದರು. ಅವರು ಬಹು ಉಗ್ರರಾಗಿದ್ದರಿಂದ ಆ ದಾರಿಯಲ್ಲಿ ಯಾರೂ ತಿರುಗಾಡಲಾರದೆ ಇದ್ದರು. 29ಅವರು ದೇವರ ಮಗನೇ, ನಮ್ಮ ಗೋಡವೆ ನಿನಗೇಕೆ? ಕಾಲ ಬರುವದಕ್ಕಿಂತ ಮುಂಚೆ ನಮ್ಮನ್ನು ಕಾಡುವದಕ್ಕೆ ಇಲ್ಲಿಗೆ ಬಂದಿಯಾ ಎಂದು ಕೂಗಿದರು. 30ಸ್ವಲ್ಪ ದೂರದಲ್ಲಿ ಬಹಳ ಹಂದಿಗಳ ಒಂದು ಹಿಂಡು ಮೇಯುತ್ತಿತ್ತು. 31ಆ ದೆವ್ವಗಳು ನೀನು ನಮ್ಮನ್ನು ಇವರೊಳಗಿಂದ ಹೊರಡಿಸುವದಾದರೆ ಆ ಹಂದಿಯ ಗುಂಪಿನೊಳಗೆ ಕಳುಹಿಸಿಕೊಡು ಎಂದು ಬೇಡಿಕೊಂಡವು. 32ಆತನು - ಹೋಗಿರಿ ಅನ್ನಲು ಅವು ಹೊರಗೆ ಬಂದು ಹಂದಿಗಳೊಳಗೆ ಹೊಕ್ಕವು; ಆ ಕ್ಷಣವೇ ಆ ಗುಂಪೆಲ್ಲಾ ಓಡಿ ಕಡಿದಾದ ಸ್ಥಳದಿಂದ ಸಮುದ್ರದೊಳಗೆ ಬಿದ್ದು ನೀರಿನಲ್ಲಿ ಮುಣುಗಿ ಸತ್ತುಹೋಯಿತು. 33ಮೇಯಿಸುವವರು ಊರೊಳಕ್ಕೆ ಓಡಿಹೋಗಿ ಇದನ್ನೆಲ್ಲಾ ದೆವ್ವಹಿಡಿದವರ ಸಂಗತಿ ಸಹಿತವಾಗಿ ತಿಳಿಸಲು 34ಊರಿನವರೆಲ್ಲರೂ ಯೇಸುವಿನೆದುರಿಗೆ ಹೊರಟುಬಂದು ಆತನನ್ನು ಕಂಡು ತಮ್ಮ ಸೀಮೆಯನ್ನು ಬಿಟ್ಟುಹೋಗಬೇಕೆಂದು ಬೇಡಿಕೊಂಡರು.**

**ವಚನ 28.** ಯೇಸು ಜನರಿಂದ ಸ್ವಲ್ಪಹೊತ್ತು ದೂರವಾಗಿದ್ದು ಅದು ಪ್ರಯಾಸದಿಂದ ಕೂಡಿದ ವಿಶ್ರಾಂತಿಯಾಗಿತ್ತು. ಗಲಿಲಾಯ ಸಮುದ್ರವನ್ನು ಶಾಂತಗೊಳಿಸಿದ ತರುವಾಯ, ಆತನು ತನ್ನ ಶಿಷ್ಯರೊಂದಿಗೆ **ಆಚೆದಡಕ್ಕೆ** ಬಂದನು ಮತ್ತು ಅಲ್ಲಿ ಇನ್ನೊಂದು ನಾಟಕಾತ್ಮಕ ದೃಶ್ಯವನ್ನು ಸಂದಿಸಿದರು (8:18ರ ಮೇಲಿನ ವ್ಯಾಖ್ಯಾನ ನೋಡಿರಿ).

ಯೇಸು ಆಚೆದಡಕ್ಕೆ ಬಂದಿರುವ ಸ್ಥಳ **ಗದರೇನರ ದೇಶವಾಗಿತ್ತು,** ಮಾರ್ಕ ಮತ್ತು ಲೂಕ ಅವರು ಅದನ್ನು "ಗೆರಸೇನರ ದೇಶ" ಎಂದು ಕರೆದಿದ್ದಾರೆ (ಮಾರ್ಕ 5:1; ಲೂಕ 8:26). Lewis ವ್ಯಾಖ್ಯಾನಿಸಿದ್ದಾರೆ, "ಮನುಷ್ಯರ ಕೈಬರಹಗಳು ಈ ಸ್ಥಳವನ್ನು ನಿರ್ದಿಷ್ಟವಲ್ಲದ ಸ್ಥಳ ಕಪೆರ್ನೌಮಿಗೆ ಎದುರಾಗಿರುವ ಸ್ಥಳವೆಂದು ತೋರಿಸುತ್ತವೆ ಅಲ್ಲಿಗೆ ಯೇಸು ಬೇಟಿಕೊಟ್ಟನು."[4] ಹಿಂದಿನ ಕಾಲದ ಮನುಷ್ಯರ ಕೈ ಬರಹಗಳಲ್ಲಿ ಮೂರು ಹೆಸರುಗಳು ಕಂಡುಕೊಳ್ಳಲಾಗಿದೆ ಅವುಗಳು "ಗೆರಸೇನ್," "ಗದರೇನ," ಮತ್ತು "ಗರಗಸೇನ್."[5] ಈ ಮೂರು ಹೆಸರುಗಳು ಮೂರು ಬೇರೆ ಬೇರೆ ಸ್ಥಳಗಳನ್ನು ಸೂಚಿಸುತ್ತವೆ: ಗೆರೆಸ, ಗದೇರಾ, ಮತ್ತು ಗೆರಗೆಸ್.

(1) ಗೆರೆಸ, ಇಂದು "Jerash," ಎಂದು ಕರೆಯಲ್ಪಡುತ್ತದೆ, ಅದು ದೆಕಪೋಲಿಯಲ್ಲಿ ಒಂದು ಪಟ್ಟಣವಾಗಿದೆ. ಈ ಪಟ್ಟಣವು ಗಲಿಲಾಯ ಸಮುದ್ರದ ದಕ್ಷಿಣ ಪೂರ್ವಕ್ಕೆ - ದಕ್ಷಿಣ ಭಾಗದಲ್ಲಿ ಸುಮಾರು ಮೂವತ್ತೈದು ಮೈಲುಗಳ ದೂರದಲ್ಲಿದೆ ಮತ್ತು ಮೂಲ ಪಠ್ಯದಲ್ಲಿ ಕೊಟ್ಟಿರುವ ವಿವರಣೆಯು ಸರಿಹೊಂದದೆ ಇರಬಹುದು.

(2) ಗದರೆ, ಇದು ಸಹ ದೇಕಪೋಲಿಯ ಇನ್ನೊಂದು ಪಟ್ಟಣ, ಗಲಿಲಾಯ ಸಮುದ್ರದ ದಕ್ಷಿಣ ಪೂರ್ವಕ್ಕೆ ಸುಮಾರು ಐದು ಮೈಲು ದೂರದಲ್ಲಿದೆ. ಅಲ್ಲಿ Yarmuk ನದಿಯ ದಕ್ಷಿಣಭಾಗದಲ್ಲಿ Umm Qeis ಎನ್ನುವ ಊರು ಗುರುತಿಸಲ್ಪಟ್ಟಿದೆ. ಇದರ ಭೂಭಾಗ ಈ ಗಲಿಲಾಯ ಸಮುದ್ರಕ್ಕೆ ಮುಟ್ಟಿದೆ, ಅದು ಮತ್ತಾಯನು ಹೇಳಿರುವ "ಗದರೇನರ ದೇಶಕ್ಕೆ" ಸರಿಹೊಂದುವದು. ಈ ಆಲೋಚನೆಯು Josephus' ಅವರು ಹೇಳಿರುವ ಸೂಚನೆ ಸಹಮತ ನೀಡುತ್ತದೆ. "... ಹಳ್ಳಿಗಳು ಗದೆರಗೆ ಸಂಬಂಧಪಟ್ಟವುಗಳು ... ಅವುಗಳು ತಿಬೇರಿಯಾ [ಸಮುದ್ರ] ಗಡಿಭಾಗದಲ್ಲಿ ಸ್ಥಾಪಿಸಲ್ಪಟ್ಟಿದೆ."[6] ಈ ಒಂದು ಆಯ್ಕೆ ಇನ್ನೊಂದಕ್ಕೆ ಸಮವಾಗಿ ಕಾಣಿಸುತ್ತದೆ.

(3) ಗೆರಗೆಸ್ ಈ ಪಟ್ಟಣವು ಸಮುದ್ರದ ಪೂರ್ವ ಭಾಗದಲ್ಲಿದೆ. ಇದನ್ನು ಇಂದಿನ ಎಂಬ ಹಳ್ಳಿಯೆಂದು ಗುರುತಿಸಿದ್ದಾರೆ, ಇದು ಸಮುದ್ರದ ಮಧ್ಯಭಾಗದ ಪೂರ್ವದಲ್ಲಿ ಇರುತ್ತದೆ. 1970ರಲ್ಲಿ ಮಾಡಿರುವ ಭೂಶೋಧನೆಯು, ಮೊದಲನೆ ಶತಮಾನದ ಹಳ್ಳಿಯೊಂದು, ಅದರೊಂದಿಗೆ ಐದನೇ ಶತಮಾನದ ಒಂದು ನ್ಯಾಯಲಾಯದ ಗೃಹವನ್ನು ಕಂಡುಹಿಡಿಯಲಾಗಿದೆ ಅದು ಈ ಅದ್ಭುತವನ್ನು ಜ್ಞಾಪಕಾರ್ಥಕವಾಗಿ ಆಚರಿಸಲು ಕಟ್ಟಲಾಗಿದೆ.[7]

ಮತ್ತಾಯನ ಸುವಾರ್ತೆ ಪ್ರಕಾರ ಯೇಸು **ಇಬ್ಬರು** ದೆವ್ವಹಿಡಿರುವದನ್ನು ಆ ಪ್ರಾಂತದಲ್ಲಿ ಸಂದಿಸಿದನು ಎಂದು ಹೇಳಿದರೆ, ಮಾರ್ಕ, ಲೂಕ ಸುವಾರ್ತೆಯಲ್ಲಿ ಒಬ್ಬನ ಎಂದು ಹೇಳುತ್ತದೆ (ಮಾರ್ಕ 5:2; ಲೂಕ 8:27). ಇವರಿಬ್ಬರಲ್ಲಿ ಒಬ್ಬನನ್ನು ಮಾತ್ರ ಈ ಸುವಾರ್ತೆಗಳಲ್ಲಿ ವಿಶ್ಲೇಷಿಸಲಾಗಿದೆ, ಆದರೆ ಅವರು ಕೇಂದ್ರಿಕರಿಸಿರುವದು ದೆವ್ವಗಳ ದಂಡನ್ನೆ ಹೊಂದಿರುವ ವ್ಯಕ್ತಿಯನ್ನು ಮತ್ತು ಸಹಜವಾಗಿ ಆತನ ಕುರಿತು ಮಾತಾಡಿದ್ದಾರೆ. ಅದರಂತೆಯೆ, ಮತ್ತಾಯ 20:30-34ರಲ್ಲಿ ಯೇಸು ಇಬ್ಬರು ಕುರುಡರನ್ನು ಯೆರಿಕೋವಿನ ಹತ್ತಿರ ವಾಸಿಮಾಡಿದನು ಎಂದು ಹೇಳುತ್ತದೆ, ಮಾರ್ಕ ಮತ್ತು ಲೂಕನು ಕೇವಲ ಒಬ್ಬನೇ ಎಂದು ಹೇಳಿದ್ದಾನೆ (ಮಾರ್ಕ 10:46-52; ಲೂಕ 18:35-43). ಈ ವ್ಯತ್ಯಾಸಗಳಿಗೆ ಯಾವುದೇ ವಿಶೇಷ ಪ್ರಾಮುಖ್ಯತೆ ಕೂಡಿರುವದಿಲ್ಲ, ಬಹುಶಃ ಅವರು ಮಾರ್ಕ ಮತ್ತು ಲೂಕ ಅವರು ಕೇವಲ ನಾಟಕದಂತಹ ಘಟನೆಗಳನ್ನು ಅವರು ದಾಖಲಿಸಿದ್ದಾರೆ. ಒಬ್ಬನು ಹೆಚ್ಚಿನ ದೆವ್ವಗಳನ್ನು ಹಿಡಿದಿರುವವನನ್ನು ಗಮನವಿಡುವದು ಅದು ಆಶ್ಚರ್ಯದ ಸಂಗತಿಯಲ್ಲ.

ಇವರಿಬ್ಬರು **ದೆವ್ವಗಳನ್ನು ಹಿಡಿದಿರುವವರು** ದೆವ್ವಗಳ ಆತ್ಮದ ಅದಿನದಲ್ಲಿದ್ದರು. ಒಂದು ವೇಳೆ ಈ ರೀತಿಯಾಗಿ ದೆವ್ವ ಹಿಡಿದಿರುವದು ಇದ್ದಿದ್ದರೆ ಅದು ಹಳೆ ಒಡಂಬಡಿಕೆಯಲ್ಲಿ ಇಂಥಹ ಘಟನೆಗಳು ಬಹಳ ಕಡಿಮೆ. ದೆವ್ವದ ಆತ್ಮವು ವೈಯಕ್ತಿಕವಾಗಿ ಹಿಡಿಯುವದು ಇಲ್ಲಿ ಸೂಚಿಸಿದಂತೆ ಅದು ಸಂಶಯಾತ್ಮಕವಾಗಿದೆ (ನೋಡಿರಿ ನ್ಯಾಯಸ್ಥಾಪಕರು 9:23; 1 ಸಾಮುವೇಲ 16:14-23). ಕೇವಲ ಕೆಲವು ಉದಾಹರಣೆಗಳು ಮಾತ್ರ ಹೊಸ ಒಡಂಬಡಿಕೆಯಲ್ಲಿ ಸುವಾರ್ತೆಗಳ ನಂತರ ದಾಖಲಿಸಲಾಗಿದೆ (ಅಪೊಸ್ತಲರ ಕೃತ್ಯಗಳು 5:16; 8:7; 16:16-18; 19:11-16). ಖಚಿತವಾಗಿ, Morris ರವರ ಪ್ರಯತ್ನದಂತೆ, ಇದು ಸತ್ಯವಾಗಿದೆ ಅದೇನೆಂದರೆ "ಸತ್ಯವೇದದಲ್ಲಿ ದೆವ್ವ ಹಿಡಿದಿರುವದು ಯೇಸು ಮನುಷ್ಯನಾಗಿ ಈ ಲೋಕಕ್ಕೆ ಬಂದ ಸಮಯದಲ್ಲಿ ಸೈತಾನನ ವಿರೋದವು ಮೇಲೆ ಮೇಲೆ ಹೆಚ್ಚುವದು ಅದು ಒಂದು ಭಾಗವಾಗಿದೆ."[8]

ದೆವ್ವ ಹಿಡಿದಿರುವ ಗಂಡಸರು ಅವರು ಸಮಾಜದಿಂದ ಹೊರಗೆ **ಸಮಾದಿಗಳ** ಮಧ್ಯದಲ್ಲಿ ವಾಸಿಸುತ್ತಿದ್ದರು, ಅವರು "ಸತ್ತವರ ಎಲುಬುಗಳಿಂದ ಮತ್ತು ಎಲ್ಲಾ ಹೊಲಸಿನಿಂದಲೂ ತುಂಬಿರುತ್ತವೆ" (23:27). ಅವರು ಅತಿಯಾದ **ಉಗ್ರರಾಗಿದ್ದರಿಂದ** ಕೂಡಿದ್ದರು, ಮತ್ತು ಅಲ್ಲಿಂದ ಯಾರೊಬ್ಬರೂ **ತಿರುಗಾಡಲಾರದೆ** ಸಾಧ್ಯವಾಗುತ್ತಿರಲಿಲ್ಲ, ಆ ಊರಿನ ಜನರು ಅವರನ್ನು ಬೇರೆಯಾಗಿ ಇಟ್ಟಿದ್ದರು ಮತ್ತು ಅವರನ್ನು ಹತೋಟಿಯಲ್ಲಿಟ್ಟಿದ್ದರು, ಅವರ ಕಾರ್ಯಗಳು ಅವರ ಉಗ್ರತೆಯನ್ನು ಅದಿನದಲ್ಲಿದ್ದು ಅವುಗಳು ಹೊರಗೆ ಬಂದು ತೊಂದರೆ ಕೊಡದಂತೆ ನಿರ್ಬಂದಿಸಿದ್ದರು, ಆದರೆ ಯಾವುದೇ ಉಪಯೋಗವಾಗಲಿಲ್ಲ (ಮಾರ್ಕ 5:3, 4; ಲೂಕ 8:29). ಒಬ್ಬನು "ನಿತ್ಯ ರಾತ್ರಿ ಹಗಲು ಸಮಾದಿಯ ಗವಿಗಳಲ್ಲಿಯೂ ಗುಡ್ಡಗಳಲ್ಲಿಯೂ ಆರ್ಭಟಿಸುತ್ತಾ ಕಲ್ಲುಗಳಿಂದ ತನ್ನನ್ನು ಕಡಿದುಕೊಳ್ಳುತ್ತಾ ಇದ್ದನು" (ಮಾರ್ಕ 5:5). ಈ ಬಡ ಮನುಷ್ಯನು ಇಡಿ ಸಂಪೂರ್ಣ ದೆವ್ವಗಳ ದಂಡಿನಿಂದ ಕಷ್ಟಪಡುತ್ತಿದ್ದನು. ಯೇಸು ಅವನಿಗೆ ಹೆಸರನ್ನು ಕೇಳುವಾಗ ಅವನು "ನನ್ನ ಹೆಸರು ದಂಡು; ಅಂದರೆ ನಾವು ಬಹು ಮಂದಿ ಇದ್ದೇವೆ ಎಂದನು" (ಮಾರ್ಕ 5:9). ರೋಮನ್ ಸೈನ್ಯವು ಆ ಒಂದು ದಂಡು ಅಂದರೆ ಆರು ಸಾವಿರ ಜನರು ಒಂದು ದಂಡಿನಲ್ಲಿರುತ್ತಿದ್ದರು, ಆದರೆ ಆ ಮನುಷ್ಯನು ಆರು ಸಾವಿರ ದೆವ್ವಗಳಿಂದ ಹಿಡಿಯಲ್ಪಟ್ಟಿದ್ದನು ಎಂದು ಅರ್ಥವಲ್ಲ. ಈ ಪದ "ದಂಡು" ಬಹಳ ಸಂಖ್ಯೆ ಅಥವಾ ದೊಡ್ಡ ಸೈನ್ಯವೆಂದು ಸೂಚಿಸುತ್ತದೆ.

**ವಚನ 29.** ಯೇಸುವನ್ನು ಕಂಡು "ಓಡಿ ಬಂದು ಆತನಿಗೆ ಅಡ್ಡಬಿದ್ದನು" (ಮಾರ್ಕ 5:6). "ಅಡ್ಡ ಬಿದ್ದನು" ಎನ್ನುವದಕ್ಕೆ ಗ್ರೀಕ್ ಶಬ್ದ (*proskuneō*) ಇದನ್ನು "ಆರಾಧನೆ" ಎಂದು ಸಹ ಅನುವಾದಿಸಲಾಗಿದೆ, ಭಾಗುವದು ಒಂದು ಸಾಮಾನ್ಯವಾದ ಗೌರವ ಸೂಚಿಸುವಂಥದ್ದು ಅಥವಾ ಘನತೆಯನ್ನು ತೋರಿಸಂಥದ್ದು ಆಗಿದೆ (2:2ರ ಮೇಲಿನ ವ್ಯಾಖ್ಯಾನ ನೋಡಿರಿ). ಈ ವಿಷಯದಲ್ಲಿ ದೆವ್ವದ ಭಾಗವಾಗಿ ಒಂದು ಕಡೆ ಶರಣಾಗುತ್ತಿದ್ದಾನೆ ಮನುಷ್ಯನ ಒಂದು ಭಾಗವಾಗಿ ಆರಾಧನೆ ಮಾಡುತ್ತಿದ್ದಾನೆ.

ಅವರಿಬ್ಬರಲ್ಲಿರುವ ದೆವ್ವಗಳು ಕೂಗಿ **ನಮ್ಮ ಗೊಡವೆ ನಿನಗೇಕೆ ...?** ಅವರಿಗೆ ಬಿಟ್ಟು ಬಿಡ ಬೇಕಾಗಿತ್ತು; ಅವರು ಯೇಸುವಿನೊಂದಿಗೆ ಏನನ್ನು ಮಾಡುವದು ಬೇಕಾಗಿರಲಿಲ್ಲ. ಇಂಥಹ ಪ್ರಶ್ನೆಗಳು ದೇವರ ವಾಕ್ಯದಲ್ಲಿ ಕೆಲವು ಕಡೆ ಕಂಡುಕೊಳ್ಳುತ್ತೇವೆ (ನ್ಯಾಯಸ್ಥಾಪಕರು 11:12; 2 ಸಮುವೇಲ 16:10; 19:22; 1 ಅರಸುಗಳು 17:18; 2 ಅರಸು 3:13; 2 ಪೂರ್ವಕಾಲ ವೃತ್ತಾಂತ 35:21; ಮಾರ್ಕ 1:24; ಯೋಹಾನ 2:4).

ಎಲ್ಲಾ ಮೂರು ಸುವಾರ್ತೆಗಳ ಸಾರಾಂಶ ಅನುಕ್ರಮವು ದೆವ್ವಗಳು ದೇವರಲ್ಲಿ ನಂಬಿ ಇಟ್ಟಿದ್ದವು ಮತ್ತು ಯೇಸು **ದೇವ ಕುಮಾರನು** ಎಂದು ನಂಬಿದ್ದವು (8:29; ಮಾರ್ಕ 5:7; ಲೂಕ 8:28). ಈ ವಿವರಣೆಯು ಯಾಕೋಬನ ಹೇಳಿಕೆಯನ್ನು ದೃಢಪಡಿಸುತ್ತದೆ ಅದು "ದೆವ್ವಗಳು ಕೂಡ ಹಾಗೆಯೇ ನಂಬಿ ಹೆದರಿ ನಡಗುತ್ತವೆ" (ಯಾಕೋಬ 2:19). ದೆವ್ವಗಳು

ಯೇಸು ದೇವರ ಕುಮಾರನು ಎಂದು ನಂಬುವದಷ್ಟೆ ಅಲ್ಲ, ಆದರೆ ಆತನು ಪರಿಶುದ್ಧ ದೇವರು ಎಂದು ಒಪ್ಪಿಕೊಳ್ಳುತ್ತೇವೆ (ನೋಡಿರಿ ಮಾರ್ಕ 1:24; 3:11; ಲೂಕ 4:41).

ದೆವ್ವಗಳು ಯೇಸುವಿಗೆ, **ಕಾಲವು ಬರುವದಕ್ಕಿಂತ ಮುಂಚೆ ನಮ್ಮನ್ನು ಕಾಡುವದಕ್ಕೆ ಇಲ್ಲಿಗೆ ಬಂದಿಯಾ?** ಎಂದು ಕೂಗಿದರು. ಅವುಗಳಿಗೆ ಮುಂದೆ ಒಂದು ದಿನ ಉರಿಯುವ ಬೆಂಕಿಗೆ ಕಳಿಸಲ್ಪಡುತ್ತೇವೆ ಎಂದು ಗೊತ್ತಿತ್ತು (ನೋಡಿರಿ 25:41).

ಅವರು ಯೇಸುವಿನ ಕಾಲಿಗೆ ಬಿದ್ದು "ಪಾತಾಳಕ್ಕೆ" ಕಳಿಸಬೇಡವೆಂದು ಬೇಡಿಕೊಂಡವು (ಲೂಕ 8:31). "ಪಾತಾಳಕ್ಕೆ" ಗ್ರೀಕ್ ಭಾಷೆಯ ಶಬ್ದ *abussos*, ಅದರ ಅರ್ಥ "ಅಳೆಯಲಾಗದ ಆಳ." ಅಲ್ಲಿ ದೆವ್ವಗಳ ಆತ್ಮಗಳು ಅಂತಿಮ ತೀರ್ಪಿನವರೆಗೆ ಅಲ್ಲಿರುತ್ತವೆ ಎಂದು ಹೇಳುತ್ತದೆ (ನೋಡಿರಿ 2 ಪೇತ್ರ 2:4; ಯೂದ 6). KJV ಸಾಮಾನ್ಯವಾಗಿ ಅದನ್ನು "ತಳವಿಲ್ಲದ ತಗ್ಗ" ಎಂದು ಅನುವಾದಿಸುತ್ತದೆ. ಪಾತಾಳವು ಅದು ಪ್ರಕಟಣೆಯಲ್ಲಿ ಅದರ ಆಳವನ್ನು ವರ್ಣಿಸಲಾಗಿದೆ ಕತ್ತಲು ಸುರಂಗದಲ್ಲಿ ದಟ್ಟವಾದ ಹೊಗೆಯಿಂದ ತುಂಬಿದೆ ಮತ್ತು ಭಯಪಡಿಸುವ ಪ್ರಾಣಿಗಳು ಅಲ್ಲಿದ್ದವು. ದೇವದೂತನು ಅದರ ಬೀಗದ ಕೈಯನ್ನು ಹೊಂದಿದ್ದನು, ಅವನು ಅಲ್ಲಿ ಪ್ರವೇಶಿಸುವವರನ್ನು ಮತ್ತು ಅಲ್ಲಿಂದ ಹೋಗುವವರನ್ನು ನಿಯಂತ್ರಿಸುತ್ತಿದ್ದನು (ಪ್ರಕಟಣೆ 9:1, 2, 11; 11:7; 17:8; 20:1, 3). ಯೇಸು ಪಾತಾಳದಲ್ಲಿ ನಮ್ಮನ್ನು ಬಿಸಾಡುತ್ತಾನೆ, ನಮಗೆ ಶಿಕ್ಷೆ ಆಗುವದಕ್ಕಾಗಿ ನೇಮಿಸಲ್ಪಟ್ಟಿದ್ದೇವೆ ಎಂದು ಭಯಪಟ್ಟಿದ್ದವು.

**ವಚನ 30.** ದೆವ್ವ ಹಿಡಿದಿರುವ ವ್ಯಕ್ತಿ ಮತ್ತು ಯೇಸುವಿಗೆ **ಸ್ವಲ್ಪ ದೂರವಿದ್ದನು, ಬಹಳ ಹಂದಿಗಳ ಒಂದು ಹಿಂಡು ಮೇಯುತ್ತಿತ್ತು** ಅಥವಾ "ಹುಲ್ಲು ಮೇಯುತ್ತಿತ್ತು" (AB). ಅವುಗಳು "ಸುಮಾರು ಎರಡು ಸಾವಿರ ಹಂದಿಗಳಿದ್ದವು" (ಮಾರ್ಕ 5:13). ಈ ಪ್ರಾಂತವು ಪ್ರತ್ಯೇಕವಾಗಿ ಅನ್ಯರು (ಸಿರಿಯನ್ನರು)[9] ವಾಸಿಸುತ್ತಿದ್ದರು, ಅವರು ಯೆಹೂದ್ಯರಿಗಿಂತಲೂ ಅವರು ಹೆಚ್ಚಾಗಿ ಹಂದಿಗಳನ್ನು ಬೆಳೆಸುವದು ಅವರ ವೃತ್ತಿಯಾಗಿತ್ತು (7:6 ರ ಮೇಲಿರುವ ವ್ಯಾಖ್ಯಾನ ನೋಡಿರಿ). ಇಸ್ರಾಯೇಲ ನೆಲದಲ್ಲಿ ಯೆಹೂದ್ಯರು "ಎಲ್ಲಿಯೂ ಹಂದಿಗಳನ್ನು ಸಾಕಲಿಲ್ಲ" ಎಂದು ಯೆಹೂದ್ಯ ಧರ್ಮಗುರುಗಳ ಸಂಪ್ರದಾಯ ಹೇಳುತ್ತದೆ.[10]

**ವಚನಗಳು 31, 32. ದೆವ್ವಗಳು** ಕೇವಲ ಯೇಸು ದೇವರ ಮಗನು ಎಂದು (8:29) ಗುರುತಿಸದೆ, ಅವರನ್ನು ಹೊರಗಡೆ ಹೊಡಿಸಲು ಶಕ್ತಿಯುಳ್ಳವನು ಎಂದು ಗೊತ್ತಿತ್ತು. ಯೇಸುವಿಗೆ, **ನೀನು ನಮ್ಮನ್ನು ಇವರೊಳಗಿಂದ ಹೊರಡಿಸುವದಾದರೆ ಆ ಹಂದಿಯ ಗುಂಪಿನೊಳಗೆ ಕಳುಹಿಸಿ ಕೊಡು ಎಂದು ಬೇಡಿಕೊಂಡಿವು.** Donald A. Hagner ರವರು ಒಂದು ಯೋಗ್ಯವಾದ ಎಚ್ಚರಿಕೆಯನ್ನು ಕೊಟ್ಟಿದ್ದಾನೆ:

> ಈ ಸಂದರ್ಭದಲ್ಲಿ ಓದುವವನು ಸಂಶಯವಿಲ್ಲದೆ ಈ ಮೂಲ ಪಠ್ಯದ ಪ್ರಶ್ನೆಗಳನ್ನು ವ್ಯಾಖ್ಯಾನಕರ್ತಗೆ ತರುತ್ತಾನೆ ಅದಕ್ಕೆ ಉತ್ತರಿಸುವದೆ ಕಷ್ಟಕರವಾಗಿದೆ, ಅಂಥಹ ಪ್ರಶ್ನೆಗಳು, ಯಾಕೆ ದೆವ್ವಗಳು ಈ ಕೋರಿಕೆ ಮಾಡಿದವು (ವಚನ 31)? ಯೇಸು ಯಾಕ ಅವರ ಕೋರಿಕೆಗೆ ಲಕ್ಷ್ಯಕೊಟ್ಟನು (ವಚನ 32)? ಹಂದಿಗಳು ಹೊರಗೆ ಹೊಡಿಸಲಾಗುತ್ತದೆ ಎಂದು ಕೇಳಿಸಿಕೊಂಡಾಗ ಅವುಗಳ ಹಣೆಬರಹ ಏನಾಗಿರಬಹುದು (ವಚನ 32)? ಇಲ್ಲಿ ಮತ್ತು ಇಂಥಹ ಇನ್ನಿತರ ಪ್ರಶ್ನೆಗಳು, ಅವುಗಳು ಮಾನಸಿಕ ಮತ್ತು ಅಧ್ಯಾತ್ಮಿಕ ವಿವೇಕ ಇಲ್ಲದೆ ಇರುವಂಥವುಗಳು, ಅವುಗಳ ಊಹ ಪೊವನೆಗೆ ಕೇವಲ ಅವುಗಳನ್ನೆ ಅವಲಂಭನೆಯಾಗಬೇಕು.[11]

ದೆವ್ವಗಳ ಕೋರಿಕೆ ಪಾತಾಳದಿಂದ ಬೇರೆಯಾಗಿ ವಾಸಮಾಡಿಬೇಕೆನ್ನುವದು ಆಗಿತ್ತು. ಅವುಗಳು ವಾಸಮಾಡುದಕ್ಕಿಂತ ಅವುಗಳನ್ನು ನಿರ್ಬಂಧಿಸುವದೇ ಉತ್ತಮವಾದದ್ದು ಮತ್ತಾಯ 12:43-45 ಅಶುದ್ಧ ಆತ್ಮಗಳು ವಾಸಮಾಡಲು ದೇಹಗಳು ಸಿಕ್ಕುವವರೆಗೆ ಅವುಗಳು ವಿಶ್ರಾಂತಿ ಮಾಡುವದಿಲ್ಲವೆಂದು ತಿಳಿದು ಬರುತ್ತದೆ. ಹೀಗಿದ್ದರೂ, ಈ ಅಶುಭವಾದ ಕೋರಿಕೆಯು

ಹೊರಗಿನ ತೋರಿಕೆಗೆ ಅದು ಹೊಂಚಿಸುವ ಯೋಚನೆಯಾಗಿತ್ತು. ಹಂದಿಗಳೊಳಗೆ ಹೋಗುವ ಮೊದಲು ಅವುಗಳಿಗೆ ನಾಶವಾಗುವ ಆಸೆ ಇತ್ತೋ? ಈ ಒಂದು ದೊಡ್ಡ ಹಂದಿಗಳ ಸಮೂಹವು ನಾಶವಾಗುವದು ಆಗಿರಬಹುದು, ಇಂಥಹ ಕಾರ್ಯ ಅವುಗಳಿಗೆ ತಿಳಿಯುವಾಗ ಅದು ಯೇಸುವಿಗೆ ಜನಸಾಮಾನ್ಯರು ವಿರೋಧಪಡಿಸುವಂಥಹ ಕಾರ್ಯವಾಗಿದೆ. ಅದು ಆಗಿದೆಯೋ ಅಥವಾ ಇಲ್ಲ ಆದರೆ ಅವುಗಳಿಗೆ ಅದು ನಿಶ್ಚಯವಾಗಿ ಹೊರಗೆ ಬರುವದೇ ಒತ್ತಡದ ಸ್ಥಿತಿಯಾಗಿತ್ತು.

ಕರ್ತನ ಸರಳವಾದ, ಒಂದು ಆಜ್ಞೆ **ಹೋಗಿರಿ!** ಎಂದಾಗ ದೆವ್ವಗಳು ಹಂದಿಗಳೊಳಗೆ ಹೊಕ್ಕವು. ಪ್ರತಿಕ್ರಿಯೆ ನಾಟಕೀಯ ರೂಪದಲ್ಲಿತ್ತು ಹುಚ್ಚುಹಿಡಿದಿರುವಂತೆ ರಭಸವಾಗಿ ಓಡಿ ಕಡಿದಾದ ಸ್ಥಳದಿಂದ ಸಮುದ್ರದೊಳಗೆ ಬಿದ್ದವು. ನೀರಿನಲ್ಲಿ ಬಿದ್ದವು ನಂತರ ದೆವ್ವಗಳಿಗೆ ಏನಾಯ್ತು, ನಮಗೆ ಗೊತ್ತಿರುವದಿಲ್ಲ. ಇದರಿಂದ ನಮಗೆ ಖಚಿತವಾಗುತ್ತದೆ, ಅವುಗಳಲ್ಲಿ ದುಷ್ಟ ಆತ್ಮಗಳು ಜೀವಿಸುತ್ತಿರುವಾಗ, ಬಿದ್ದು ಹೋಗುವದರಿಂದ ನಾಶವಾಗುವದಿಲ್ಲ. ಅವುಗಳಿಗೆ ಈ ರೀತಿಯಾಗಿ ನಾಶವಾಗುತ್ತಿರುತ್ತವೆ ಎಂದು ಗೊತ್ತಿದ್ದರೆ, ಅವುಗಳು ಹಂದಿಗಳನ್ನು ಸಮುದ್ರದಲ್ಲಿ ಬೀಳದಂತೆ ಮಾಡುತ್ತವೆ. ದೆವ್ವಗಳು ಸೃಷ್ಠಿಯಲ್ಲಿ ನಾಶವಾಗುತ್ತವೆ, ಅವುಗಳು ಸ್ವಂತವಾಗಿ ನಾಶವಾಗುವದಿಲ್ಲ.

**ವಚನ 33. ಮೇಯಿಸುವವರು** ಹಂದಿಗಳ ಮಾಲೀಕರಲ್ಲ, ಆದರೆ ಅವುಗಳ ಮಾಲೀಕರಿಗೆ ಮೇಯಿಸುವವರು ಈ ದೊಡ್ಡ ಕಾರ್ಯದ ಜವಾಬ್ದಾರಿ ಕೊಡಲ್ಪಟ್ಟಿತ್ತು. ಈ ಪ್ರಾಂತವು ಅನ್ಯರ ಪ್ರಾಂತವಾಗಿತ್ತು ಈ ಹಂದಿಗಳು ದೊಡ್ಡ ಶ್ರೀಮಂತನಿಗೆ ಸೇರಿದ್ದವುಗಳಾಗಿದ್ದವು ಮೇಯಿಸುವವರನ್ನು ಕೂಲಿಗಾಗಿ ಇಟ್ಟುಕೊಂಡು ಹಂದಿಗಳನ್ನು ಮೇಯಿಸುವ ಜವಾಬ್ದಾರಿ ಕೊಟ್ಟಿದ್ದನು.

ಮೇಯಿಸುವವನು ಅವನು ಭಯಗೊಂಡದ್ದರಲ್ಲಿ ಸಂಶಯವಿಲ್ಲ ಆಭಯದಲ್ಲಿಯೇ ಅಲ್ಲಿ ಆಗತಾನೆ ಆಗಿರುವದನ್ನು ನೋಡಿ **ಊರಿನೊಳಗೆ ಓಡಿಹೋಗಿ ಇದನ್ನೆಲ್ಲಾ** ತಿಳಿಸಿದನು. ನಿಶ್ಚಯವಾಗಿ ಆಗತಾನೇ ನಾಶವಾಗಿರುವ ಹಂದಿಗಳ ಗುಂಪಿನ ನಿಖರವಾದ ಬೆಲೆಯ ಜವಾಬ್ದಾರಿ ಅವನ ಮೇಲೆ ಹೊರಿಸಲಿಲ್ಲ. **ಮೇಯಿಸುವವನು ಸಹ ದೆವ್ವಹಿಡಿದಿರುವವರಿಗೆ ಏನಾಯಿತು ಎಂಬುದನ್ನು ಹೇಳಿದನು.**

**ವಚನ 34.** ಈ ಮೇಯಿಸುವವನು ಹೇಳಿರುವ ಸುದ್ದಿಯು ದೊಡ್ಡ ಕೊಲಾಹಲ ಎಬ್ಬಿಸಿತು, ಮತ್ತು **ಊರಿನವರೆಲ್ಲರು ಯೇಸುವನ್ನು ಬೇಟಿಯಾಗಲು ಬಂದರು.** ಆತನನ್ನು ಕಂಡಾಗ ಜನರು ಏನು ಮಾಡಿದರು? ಮಾರ್ಕನು ಕೇಂದ್ರಿಕರಿಸಿದ ಒಬ್ಬ ವ್ಯಕ್ತಿ ಅಲ್ಲಿ ಅವನೊಂದಿಗೆ ಇತರರು ಇದ್ದಿರಬಹುದು - ಅವನು ಬಟ್ಟೆಗಳನ್ನು ಹಾಕಿಕೊಂಡು ಸ್ವಸ್ಥಬುದ್ಧಿಯಿಂದ ಕೂತಿದ್ದನು (ಮಾರ್ಕ 5:15). ಆ ಕ್ಷಣದಲ್ಲಿ ಯೇಸು ರಭಸವಾಗಿ ಬಂದಿರುವ ಗಾಳಿಯನ್ನು ಶಾಂತಗೊಳಿಸಿದನು (8:26). ಈ ಇಬ್ಬರ ಜೀವಿತದಲ್ಲಿಯೂ ಸಹ ಸಮಾಧಾನವನ್ನು ತಂದುಕೊಟ್ಟನು.

ತರುವಾಯ ಆ ಜನರು ಯೇಸುವಿಗೆ, **ತಮ್ಮ ಸೀಮೆಯನ್ನು ಬಿಟ್ಟುಹೋಗಬೇಕೆಂದು ಬೇಡಿಕೊಂಡರು.** ಜನರು ಹಂದಿಗಳನ್ನು ಕಳೆದು ಕೊಂಡದ್ದಕ್ಕೆ ಬಹಳ ದುಃಖಪಟ್ಟರು ಎಂದು ಕೆಲವರು ನಂಬುತ್ತಾರೆ, ಮಾರ್ಕನ ಪ್ರಕಾರ ಇನ್ನೊಂದು ಕಾರಣವನ್ನು ಅವರ ವಿಷಯದಲ್ಲಿ ಗುರುತಿಸಿದ್ದಾನೆ: ಯೇಸುವಿನ ಭಯಂಕರವಾದ ಬಲವನ್ನು ನೋಡಿ "ಅವರು ಹೆದರಿದರು" (ಮಾರ್ಕ 5:15). ಅವರು ಸಹಾಯ ಮಾಡಲು ಆಗಲಿಲ್ಲ ಆದರೆ ಅವರು ಮೊದಲು ದೆವ್ವಹಿಡಿದವರನ್ನು ನೋಡಿದಾಗ ಮೇಯಿಸುವವನ ಸಾಕ್ಷಿಯನ್ನು ನಂಬಿದರು - ಮತ್ತು ಬಹಳ ಮಂದಿ ಹಂದಿಗಳ ಮೃತ ದೇಹಗಳು ಸಮುದ್ರದ ಮೇಲೆ ತೇಲುತ್ತಿರಬಹುದು.

ಮಾರ್ಕನು ಇದನ್ನು ಸಹ ದಾಖಲಿಸಿದ್ದಾನೆ ಮೊದಲು ದೆವ್ವ ಹಿಡಿದವನು ಯೇಸುವಿಗೆ ಹೀಗೆ ಕೇಳಿದನು ನಾನು "ನಿನ್ನ ಬಳಿಯಲ್ಲಿಯೇ ಇರುತ್ತೇನೆ" (ಮಾರ್ಕ 5:18). ಅದಕ್ಕೆ ಯೇಸು, "ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು

ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು ಅಂದನು" (ಮಾರ್ಕ 5:19). ಅದರ ನಿಮಿತ್ತವಾಗಿ, ಅವನು "ಹೊರಟು ಹೋಗಿ ಯೇಸು ತನಗೆ ಮಾಡಿದ ಉಪಕಾರಗಳನ್ನು ದೆಕಪೊಲಿ ಎಂಬ ಸೀಮೆಯಲ್ಲಿ ಸಾರುವದಕ್ಕೆ ಪ್ರಾರಂಭಿಸಿದನು; ಎಲ್ಲರೂ ಆಶ್ಚರ್ಯಪಟ್ಟರು" (ಮಾರ್ಕ 5:20).

## ಪಾರ್ಶ್ವವಾಯು ರೋಗಿಯನ್ನು ಸ್ವಸ್ಥಮಾಡಿದ್ದು (9:1-8)

ಈ ಘಟನೆಗಳು ನಡೆದಿರುವದು ಒಂದು ಊರಿನಲ್ಲಿ ಅಲ್ಲಿ ಯೇಸು ಪಾರ್ಶ್ವವಾಯು ರೋಗಿಯನ್ನು ಸ್ವಸ್ಥಮಾಡಿ ಅವನ ಪಾಪಗಳನ್ನು ಕ್ಷಮಿಸಿದನು. ದೇವದೂಷಣೆ ಮಾಡುತ್ತಾನೆಂದು ಯೆಹೂದ್ಯ ನಾಯಕರು ಯೇಸುವನ್ನು ದೂಷಿಸಿದರು, ಆತನ ಮಹತ್ಕಾರ್ಯಗಳನ್ನು ನೋಡಿ ಜನರು ಆಶ್ಚರ್ಯಗೊಂಡರು ಮತ್ತು ದೇವರನ್ನು ಕೊಂಡಾಡಿದರು.

**1ಆತನು ದೋಣಿಯನ್ನು ಹತ್ತಿ ಸಮುದ್ರವನ್ನು ದಾಟಿ ತನ್ನ ಊರಿಗೆ ಬಂದನು.**
**2ಅಲ್ಲಿಗೆ ಬಂದಾಗ ಹಾಸಿಗೆಯ ಮೇಲೆ ಬಿದ್ದು ಕೊಂಡಿರುವ ಒಬ್ಬ ಪಾರ್ಶ್ವವಾಯುರೋಗಿ**
**ಯನ್ನು ಆತನ ಬಳಿಗೆ ಹೊತ್ತುಕೊಂಡು ಬಂದರು. ಯೇಸು ಅವರ ನಂಬಿಕೆಯನ್ನು ನೋಡಿ**
**ಪಾರ್ಶ್ವವಾಯುರೋಗಿಗೆ - ಮಗನೇ, ಧೈರ್ಯವಾಗಿರು, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು**
**ಹೇಳಿದನು. 3ಅಲ್ಲಿದ್ದ ಶಾಸ್ತ್ರಿಗಳಲ್ಲಿ ಕೆಲವರು - ಇವನು ದೇವದೂಷಣೆ ಮಾಡುತ್ತಾನೆಂದು**
**ತಮ್ಮತಮ್ಮೊಳಗೆ ಮಾತಾಡಿಕೊಂಡರು. 4ಯೇಸು ಅವರ ಆಲೋಚನೆಗಳನ್ನು ತಿಳಿದು -**
**ನೀವು ಯಾಕೆ ನಿಮ್ಮ ಮನಸ್ಸಿನಲ್ಲಿ ಕೆಟ್ಟ ಆಲೋಚನೆಯನ್ನು ಮಾಡುತ್ತೀರಿ? 5ಯಾವದು**
**ಸುಲಭ? ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಅನ್ನುವದೋ? ಎದ್ದು ನಡೆ ಅನ್ನುವದೋ?**
**6ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯಕುಮಾರನಿಗೆ ಭೂಲೋಕದಲ್ಲಿ ಅಧಿಕಾರ**
**ಉಂಟೆಂಬದು ನಿಮಗೆ ತಿಳಿಯಬೇಕು ಎಂದು ಹೇಳಿ ಪಾರ್ಶ್ವವಾಯುರೋಗಿಯನ್ನು ನೋಡಿ**
**- ಎದ್ದು ನಿನ್ನ ಹಾಸಿಗೆಯನ್ನು ಎತ್ತಿ ಕೊಂಡು ಮನೆಗೆ ಹೋಗು ಅಂದನು. 7ಅವನು ಎದ್ದು**
**ಮನಗೆ ಹೋದನು. 8ಜನರು ಇದನ್ನು ನೋಡಿ ಭಯಪಟ್ಟು ದೇವರು ಮನುಷ್ಯರಿಗೆ ಅಂಥ**
**ಅಧಿಕಾರವನ್ನು ಕೊಟ್ಟದ್ದಕ್ಕೆ ಆತನನ್ನು ಕೊಂಡಾಡಿದರು.**

**ವಚನ 1.** ಆಶ್ಚರ್ಯಕರವಾದ ಅದ್ಭುತವನ್ನು ಗದರನಲ್ಲಿ ಮಾಡಿರುವದನ್ನು ನೋಡಿ ಜನರು ಮತ್ಸರದಿಂದ ಕೂಡಿ ಊರಿನ ಜನರು ಯೇಸುವಿನಲ್ಲಿಗೆ ಬಂದು ತಮ್ಮ ಪ್ರಾಂತವನ್ನು ಬಿಟ್ಟು ಹೋಗಬೇಕೆಂದು ಕೇಳಿಕೊಂಡರು. ಆತನು ಚಿಕ್ಕ **ದೋಣಿಯನ್ನು ಹತ್ತಿ ಸಮುದ್ರದ ಆಚೆದಡಕ್ಕೆ ಬಂದನು.** ಈ "ದೋಣಿ" ಮತ್ತು "ಸಮುದ್ರದ" ಆಚೆದಡಕ್ಕೆ ದಾಟುವದು ಹಿಂದಿನ ಅಧ್ಯಾಯಗಳಲ್ಲಿ ನೋಡಿದ್ದೇವೆ (8:18, 23, 28), ಸಮುದ್ರದ ಹತ್ತಿರವಿರುವ ಊರುಗಳಲ್ಲಿಯೇ ಯೇಸು ಹಿಂದೆ ಮುಂದೆ ಅಲ್ಲಿರುವ ಊರುಗಳಿಗೆ ಹೋಗುತ್ತಿದ್ದನು.

ಯೇಸು ಸಮುದ್ರದ ಪೂರ್ವಭಾಗದಿಂದ ಅಲ್ಲಿ ಹೆಚ್ಚಾಗಿ ಅನ್ಯರೇ ವಾಸಿಸುವ ಸ್ಥಳದಿಂದ ಸಮುದ್ರವನ್ನು **ದಾಟಿ ತನ್ನ ಊರಿಗೆ ಬಂದನು.** ಅಲ್ಲಿ ಮುಖ್ಯವಾಗಿ ಯೆಹೂದ್ಯರೇ ವಾಸವಾಗಿದ್ದರು. ಆ ಸಮಯದಲ್ಲಿ, ಆತನು ತನ್ನ ಊರಿಗೆ ಬಂದನು, ಅದು ಕಪೆರ್ನೌಮ ಆಗಿತ್ತು ಆ ಊರು ಗಲಿಲಾಯ ಸಮುದ್ರದ ಉತ್ತರದ ಪಶ್ಚಿಮ ಭಾಗದಲ್ಲಿ ಇರುತ್ತದೆ (4:13ರ ವ್ಯಾಖ್ಯಾನ ನೋಡಿರಿ). ಈ ಸಮಯಕ್ಕಿಂತ ಮುಂಚಿತವಾಗಿಯೇ ಆತನು ತನ್ನ ಮನೆಯನ್ನು ಪೇತ್ರ ಮತ್ತು ಆತನ ಕುಟುಂಬದೊಂದಿಗೆ ಮಾಡಿರಬಹುದು (8:5, 14; ಮಾರ್ಕ 1:21, 29; 2:1).

**ವಚನ 2.** ಪ್ರಾರಂಭದಲ್ಲಿಯೇ, ಕಪೆರ್ನೌಮನ್ನು ಬಿಟ್ಟಾಗಲೆ ಇದನ್ನು ಮಾಡಿರಬೇಕು ಯಾಕೆಂದರೆ ಜನರು ಗುಂಪಾಗಿ ಬರುತ್ತಿದ್ದರು ಮತ್ತು ಬಹಳಮಾಡಿ ಅವರು ದಣಿವನ್ನುಂಟು ಮಾಡುತ್ತಿದ್ದರು (8:18; ನೋಡಿರಿ ಮಾರ್ಕ 1:35-38; ಲೂಕ 5:15, 16). ಹೀಗಿದ್ದರೂ

ಆತನು "ಸ್ವಂತ ಊರಿಗೆ ಹಿಂತಿರುಗಿದನು." ಆತನು ಬಂದಿರುವ ವಿಷಯ ಎಲ್ಲಾ ಕಡೆ ತಕ್ಷಣ ತಿಳಿಯಿತು. ಮತ್ತೊಂದಾವರ್ತಿ, ಜನರು ಆತನನ್ನು ಸುತ್ತುವರಿದರು, ಅವರು ಅಸ್ವಸ್ಥರಾದವರು ಗುಣವಾಗುವದಕ್ಕಾಗಿ ತೆಗೆದುಕೊಂಡು ಬರುತ್ತಿದ್ದರು; ಮತ್ತು ದೇವರ ಕರುಣೆ ತೋರಿಸಿದನು, ಅವರ ಮೇಲೆ ಆತನು ಕರುಣೆ ಇಟ್ಟನು (9:8; ಮಾರ್ಕ 2:1, 2; ಲೂಕ 5:15).

**ಪಾರ್ಶ್ವವಾಯು ರೋಗಿಯನ್ನು** ಸ್ವಸ್ಥಗೊಂಡಿರುವ ವಿಷಯದ ವಿವರಣೆಯು ಇತರೆ ಸುವಾರ್ತಿಕರು ಮಾರ್ಕ, ಲೂಕ ಕೊಟ್ಟಿರುವಂತೆ ಕೊಟ್ಟಿರುವದಿಲ್ಲ (ಮಾರ್ಕ 2:1-12; ಲೂಕ 5:17-26). ಪಾರ್ಶ್ವವಾಯು ರೋಗಿ ಬಹಳ ಗಂಭೀರವಾಗಿದ್ದನು ಯೇಸು ಇರುವಲ್ಲಿಗೆ ಹೊತ್ತುಕೊಂಡು ಬಂದರು ಎಂದು ಸ್ಪಷ್ಟವಾಗಿದೆ.

ಯಾವಾಗ ಈ ವ್ಯಕ್ತಿಯನ್ನು ನಾಲ್ಕು ಜನ ಸ್ನೇಹಿತರು ಅಥವಾ ಕುಟುಂಬ ಸದಸ್ಯರು **ಹೊತ್ತುಕೊಂಡು ಬಂದರು.** ಮಾರ್ಕ ಮತ್ತು ಲೂಕ ಅವರು ಹೇಳುವದು ಅವರು ಯೇಸುವಿನ ಹತ್ತಿರ ಬರಲು ಆಗಲಿಲ್ಲ ಯಾಕೆಂದರೆ ಅವರ ಮನೆಯಲ್ಲಿ ಬಹಳ ಜನರಿಂದ ತುಂಬಿತ್ತು (ಮಾರ್ಕ 2:4, 5; ಲೂಕ 5:19). ಅವರು ಚಾತುರ್ಯದಿಂದ ಮೇಲ್ಛಾವಣಿ ಹತ್ತಿ ಅಲ್ಲಿ ಅದನ್ನು ಬಿಚ್ಚಿ ದ್ವಾರಮಾಡಿ ಪಾರ್ಶ್ವವಾಯು ರೋಗಿಯು ಮಲಗಿದ್ದ ಹಾಸಿಗೆಯೊಂದಿಗೆ ಒಳಗಡೆ ಯೇಸು ಕುಳಿತುಕೊಂಡಿರುವ ಸ್ಥಳಕ್ಕೆ ಇಳಿಸಿದರು (ಮಾರ್ಕ 2:3, 4; ಲೂಕ 5:18, 19).

ಅವರ ನಾಲ್ಕು ಜನರನ್ನು ಮತ್ತು ಕಾಯಿಲೆಯಿಂದ ನರಳುವವನ **ನಂಬಿಕೆಯನ್ನು** ನೋಡಿ ಯೇಸು **ಮಗನೆ ಧೈರ್ಯವಾಗಿರು** ಎಂದನು. "ಧೈರ್ಯವಾಗಿರು" ಎನ್ನುವದಕ್ಕೆ ಗ್ರೀಕ್ ಶಬ್ದವು (*tharseō*) ಎಂದು ಇದರ ಅರ್ಥ ಭಯವನ್ನು ತೆಗೆದುಹಾಕು ಎಂಬುದವಂಥದ್ದಾಗಿದೆ. ಕರ್ತನು ಅವನಿಗೆ "ಅಂಜಬೇಡ" ಎಂದು ಹೇಳುತ್ತಿದ್ದಾನೆ. **ಪಾರ್ಶ್ವವಾಯು** ಹೊಂದಿದವನು ಅಂಜುವದಕ್ಕೆ ಕೆಲವು ಕಾರಣವಿದೆ: ಅವನ ಆರೋಗ್ಯ ಇನ್ನೂ ಹೆಚ್ಚಾಗಿ ಆಳಾಗುತ್ತಿರುವದು, ಬಹಳ ಜನರ ಗುಂಪು ಅಲ್ಲಿತ್ತು ಅದರಲ್ಲಿ ಇವರು ಸ್ನೇಹಿತರು ಹೀಗೆ ಅವನಿಗೆ ಅಲ್ಲಿಂದ ಇಳಿಸಿರುವದನ್ನು ಕಂಡಿದ್ದನು, ಮತ್ತು ಅಂತಹ ಶಕ್ತಿಯುಳ್ಳವನ ಮುಂದೆ ಇರುವಂಥದ್ದು ಆತನಿಗೆ ಬಹಳ ಮುಖ್ಯವಾಗಿ ಅಂಜುವದಕ್ಕೆ ಕಾರಣವಾಯಿತು.

ಮಗನೇ (*teknon*) ಎನ್ನುವ ಶಬ್ದವು (NJB)ಯಲ್ಲಿ "ಮಗು" ಎಂದು ಅನುವಾದಿ ಸಲಾಗಿದೆ. CEVಯ ಅನುವಾದವು "ಸ್ನೇಹಿತ" ಎಂಬುದಾಗಿದೆ. ಇದು ಯಾವುದೇ ವಯಸ್ಸು ಮತ್ತು ಲಿಂಗದ ಮಗುವನ್ನು ಸೂಚಿಸುತ್ತದೆ, ಅಥವಾ ಒಬ್ಬನು ಬಹಳ ಹತ್ತಿರದ ವ್ಯಕ್ತಿಯನ್ನು ಸೂಚಿಸುತ್ತದೆ, ವೈಯಕ್ತಿಯ ಸಂಪರ್ಕವನ್ನು ಸೂಚಿಸುತ್ತದೆ. ಲೂಕ 5:18 ಅದೇ ರೀತಿ ಯಾಗಿರುವ ಸಂಗತಿಯನ್ನು "ಒಬ್ಬನನ್ನು" ಎಂದು ಹೇಳುತ್ತಾನೆ, ಇಂಥಹ ಪದವನ್ನು ಯೇಸು ಬಹಳ ಪ್ರೀತಿಯನ್ನು ತೋರಿಸುವದಕ್ಕಾಗಿ ಉಪಯೋಗಿಸಿದ್ದಾನೆ.

ಯೇಸುವಿನ ಮುಂದಿನ ಮಾತುಗಳು **ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ** ಎಂದನು ಈ ರೀತಿಯಾಗಿ ಯೇಸು ಹೇಳಿರುವದು ಕೇವಲ ಎರಡು ಸಾರಿ ಮಾತ್ರವೇ (9:2; ಲೂಕ 7:48; ನೋಡಿರಿ ಲೂಕ 23:43).

ಯೇಸುವಿನ ಕಾಲದಲ್ಲಿ ಒಂದು ಪ್ರಸಿದ್ಧ ಅಭಿಪ್ರಾಯವಿತ್ತು ಎಲ್ಲಾ ಅಸ್ವಸ್ಥರು ಪಾಪಕ್ಕೆ ಸಂಬಂಧಪಟ್ಟವರು ಎನ್ನುವಂಥದ್ದು ಇದನ್ನು ತೊಲಗಿಸಿದನು (ಲೂಕ 13:1-5; ಯೋಹಾನ 9:1-3).[12] ಯಾಕೆ ಅದನ್ನು ಮಾಡಿದನು ಈ ಮಾತುಗಳಿಂದ ಆ ವ್ಯಕ್ತಿಗೆ ಹೇಳಿದನೋ? ಬಹುಶಃ ಯೇಸು ಮಾಡಿರಬಹುದು ಯಾಕೆಂದರೆ ಪಾಪದ ಸಮಸ್ಯೆಯೆ ಮೊದಲು ಪರಿಹರಿಸುತ್ತಿದ್ದರು. ಆತನ ಸಂದೇಶ ಕೇಳುವವರು ಬಾಯಿ ಮಾತಿನಿಂದ ಕೇಳುವದಕ್ಕೆ ಅವರು ಹೆಚ್ಚಾಗಿ ಹೊಂದಿಕೊಂಡಿದ್ದರು ತರುವಾಯ ಯೆಹೂದ್ಯ ಧರ್ಮಶಾಸ್ತ್ರವನ್ನು ಕೇಳುತ್ತಿದ್ದರು: ಅದು ಹೀಗೆ ಹೇಳುತ್ತದೆ "ಒಬ್ಬ ಅಸ್ವಸ್ಥನಾದ ವ್ಯಕ್ತಿ ತನ್ನ ಎಲ್ಲಾ ಪಾಪಗಳು ಕ್ಷಮಿಸಲ್ಪಡದ ಹೊರತು ಅವರು ಗುಣವಾಗುವದಿಲ್ಲ."[13] ಇನ್ನೊಂದು ಸಾಧ್ಯತೆ ಅಲ್ಲಿದೆ ಏನೆಂದರೆ ಆ ವ್ಯಕ್ತಿಯ ಪಾಪದ ನಿಮಿತ್ತ ನೇರವಾಗಿ ಅದರ ಪರಿಣಾಮ ಕಾಯಿಲೆಯಾಗಿರುವಂಥದ್ದು, ಈ ರೀತಿಯಾಗಿ ಕೆಲವು

ಸಾರಿ ಆಗಿರಬಹುದು (ಯಾಕೋಬ 5:14-16). ಅದಕ್ಕಾಗಿ ಈ ವ್ಯಕ್ತಿ ಅಸ್ವಸ್ಥನಾದವನು ಸಹ ಹಾಗೆ ನಂಬಿರಬಹುದು ನನ್ನ ಪಾಪದ ನಿಮಿತ್ತ ನನಗೆ ಪಾರ್ಶ್ವವಾಯು ಬಂದಿದೆ ಎಂದು ಅಂದು ಕೊಂಡಿರಬಹುದು. ಅಲ್ಲಿಯ ನಿಜವಾದ ಪರಿಸ್ಥಿತಿ ಏನಿದೆಯೋ ಗೊತ್ತಿಲ್ಲ, ಯೇಸುವಿನ ಮಾತುಗಳು ಆತನಿಗೆ ಅಪಾರವಾದ ಉಪಶಮನ ತಂದು ಕೊಟ್ಟವು.

**ವಚನ 3.** ಕರ್ತನು ಕ್ಷಮಾಪಣೆ ಹೇಳಿದ ತಕ್ಷಣವೇ ವೈರತ್ವ ಅಲ್ಲಿ ಎದ್ದಿತು ಅಲ್ಲಿ ಹೊರಗಿನ ತೋರಿಕೆಗೆ ಕಾಣುವ ಸೇವೆಯ ಕುರಿತು ತೀರ್ಪು ಕೊಡಲು ಸಹಜವಾಗಿ ಬಂದಿದ್ದರು. ಆತನ ಬೋಧನೆಗಳು ಅವರ ಮಧ್ಯದಲ್ಲಿ ಕೋಲಾಹಲ ಎಬ್ಬಿಸಿದವು, ಗಲಿಲಾಯ ಯೂದಾಯಗಳ ಎಲ್ಲಾ ಗ್ರಾಮಗಳಿಂದಲೂ ಯೆರೂಸಲೇಮಿನಿಂದಲೂ ಯೆಹೂದ್ಯ ನಾಯಕರು ಆತನ ಉಪದೇಶ ಕೇಳಲು ಬಂದಿದ್ದರು (ಲೂಕ 5:17). **ಶಾಸ್ತ್ರಿಗಳಲ್ಲಿ ಕೆಲವರು** ಹಿಂದೆ ಅವರು ಯಾವುದೇ ವಿರೋಧವನ್ನು ವ್ಯಕ್ತಪಡಿಸಲಿಲ್ಲ, ಅವರು ಕೆಲವು ಫರಿಸಾಯರೊಂದಿಗೆ ಸೇರಿದರು (ಲೂಕ 5:21), ಯೇಸು ದೇವರಿಗೆ ಅವಿಧೆಯತೆ ತೋರಿಸಿದನೆಂದು ಆರೋಪಿಸಿದರು. ಅವರು ತಮ್ಮತಮ್ಮೊಳಗೆ **ಇವನು ದೇವದೂಷಣೆ ಮಾಡುತ್ತಾನೆ** ಮತ್ತು "ದೇವರೊಬ್ಬನೆ ಹೊರತು ಮತ್ತಾರು ಪಾಪಗಳನ್ನು ಕ್ಷಮಿಸಬಲ್ಲರು?" ಎಂದು ಮಾತಾಡಿಕೊಳ್ಳುತ್ತಿದ್ದರು (ಮಾರ್ಕ 2:7). ಪಾಪಗಳನ್ನು ಕ್ಷಮಿಸುವ ವಿಶೇಷ ಅಧಿಕಾರ ಅದು ದೇವರಿಗೆ ಮಾತ್ರ ಕೊಡಲ್ಪಟ್ಟಿದೆ ಎಂದು ಮಾತಾಡಿದರು (ಕೀರ್ತನೆ 103:12; ಯೆಶಾಯ 1:18; 43:25; 55:6, 7; ಯೆರೆಮೀಯ 31:34; ಮೀಕನು 7:18, 19).

**ವಚನ 4.** ಈ ಘಟನೆಯು ಯೇಸುವಿಗೆ ವಿರೋಧಿಸುವ ಮೊದಲ ಅಧಿಕೃತ ಕಾರ್ಯಗತ ವಾಗಿತ್ತು. ಮತ್ತಾಯನ ಪ್ರಕಾರ, ದೇವದೂಷಣೆ ಅದು ಗಟ್ಟಿಯಾಗಿ ಮಾತಾಡಲಿಲ್ಲ. ಯೇಸುವಿಗೆ ಆರೋಪಿಸಿದವರು ಇದನ್ನು "ತಮ್ಮ ತಮ್ಮೊಳಗೆ" ಮಾತಾಡಿಕೊಂಡರು ಅಥವಾ "ತಾವುಗಳೇ ಮಾತಾಡಿ ಕೊಂಡರು" (9:3; KJV). ಹೀಗಿದ್ದರೂ, **ಯೇಸು ಅವರ ಆಲೋಚನೆಗಳನ್ನು** ತಿಳಿದು ಕೊಳ್ಳಬಲ್ಲವನಾಗಿದ್ದನು (ನೋಡಿರಿ 12:25; 22:18; ಲೂಕ 9:47; ಯೋಹಾನ 1:47, 48; 2:25; 21:17). ಆತನು ಅವರಿಗೆ, **ನೀವು ಯಾಕೆ ನಿಮ್ಮ ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳನ್ನು ಮಾಡುತ್ತೀರಿ?** ಎಂದು ಕೇಳಿದನು. ಆತನ ದೈವತ್ವವನ್ನು ಸಂಶಯಪಡುವವರಿಗೆ ಈ ಪ್ರಶ್ನೆ ಅವರಿಗೆ ಮನದಟ್ಟು ಮಾಡಿಕೊಟ್ಟಿತು. ಅವರ ಆಲೋಚನೆಯ ಕುರಿತು ಮಾತ್ರ ಹೇಳಲಿಲ್ಲ ಆದರೆ ಅವರ ಆಲೋಚನೆಯ ಹಿಂದೆ ಇರುವ ದುಷ್ಟತನವನ್ನು ಸಹ ಬಹಿರಂಗಮಾಡಿದನು. "ದುಷ್ಟ" ಎನ್ನುವದು "ದುಷ್ಟಕಾರ್ಯಗಳನ್ನು ಮಾಡುವದು ಎಂದು ಸೂಚಿಸುತ್ತದೆ, ಆದರೆ ಇದು ಹೆಚ್ಚಾಗಿ ಆತನ ಕುರಿತು ಕೆಟ್ಟದ್ದಾಗಿ ಯೋಚಿಸುವ ಮಿತಿ ಹೆಚ್ಚಾಯಿತ್ತು."[14] ದೇವರ ಗೌರವವನ್ನು ಕಾಪಾಡುತ್ತಾ ಇದ್ದೇವೆ ಎಂದು ಅವರು ಒಳ್ಳೆಯ ಕಾರ್ಯ ಮಾಡುತ್ತಾ ಇದ್ದೆವೆಂದು ಆಲೋಚಿಸುತ್ತಿದ್ದರು, ಅವರ ದೇವರ ಮಗನನ್ನು ವಿರೋಧಿಸುವದರಿಂದ ದುಷ್ಟ ಕಾರ್ಯವನ್ನು ಮಾಡುವವರಾಗಿದ್ದರು. ಕ್ರಿಸ್ತನಿಗೆ ವಿರೋಧಿಸುವದು ದೇವರಿಗೆ ವಿರೋಧಿ ಸಿದಂತೆಯೆ ಯೇಸು ಹೇಳಿದ್ದಾನೆ, ಮಗನಿಗೆ ಮಾನಕೊಡದವನು ಅವನನ್ನು ಕಳುಹಿಸಿದ ತಂದೆಗೂ ಮಾನಕೊಡದವನಾಗಿದ್ದಾನೆ (ಯೋಹಾನ 5:23).

**ವಚನ 5.** ಯೇಸು ಅವರಿಗೆ ಯುಕ್ತವಾದ ಪ್ರಶ್ನೆಯೊಂದಿಗೆ ಪ್ರತಿಕ್ರಿಯೆ ನೀಡಿದನು: **ಯಾವುದು ಸುಲಭ? ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಅನ್ನುವದೋ? ಎದ್ದು ನಡೆ ಅನ್ನುವದೋ?** ಒಂದು ಹಂತದಲ್ಲಿ, ಇದು ಹೇಳುವದು ಸುಲಭ "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂಬುದು, ಯಾಕೆಂದರೆ ಅದನ್ನು ಖಚಿತಪಡಿಸಲು ಅಥವಾ ಅದನ್ನು ನಿರಾಕರಿಸಲು ಯಾರು ಅಲ್ಲಿ ಇರಲಿಲ್ಲ. ಇನ್ನೂ ವ್ಯತ್ಯಾಸವುಳ್ಳದ್ದಾಗಿ ಹೇಳುವದಾದರೆ, "ಎದ್ದು ನಡೆ" ಎನ್ನುವದು ಪಾರ್ಶ್ವವಾಯು ವ್ಯಕ್ತಿಯ ಪ್ರತಿಕ್ರಿಯೆಯಿಂದ ಮೌಲ್ಯ ಮಾಪನ ಮಾಡುವದು ಬಹಳ ಸುಲಭವಾಗಿದೆ. ಆ ವ್ಯಕ್ತಿ ಪ್ರತಿಕ್ರಿಯಿಸದೆ ಇದ್ದರೆ, ಯೇಸು ಒಬ್ಬ ವಂಚಕನೆಂದು ಹೇಳುತ್ತಿದ್ದರು.

ಇನ್ನೊಂದು ರೀತಿಯಾಗಿ ನಿಜವಾಗಿ ಇದನ್ನು, "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂದು ಹೇಳುವದು ಕಷ್ಟಕರವಾಗಿದೆ, ಯಾಕೆಂದರೆ ಕ್ಷಮಿಸುವಂಥದ್ದು ವಿಶೇಷ ದೈವಿಕ ಹಕ್ಕಾಗಿದೆ. ಒಬ್ಬ ಮನುಷ್ಯನಿಗೆ ದೈಹಿಕವಾಗಿ ಗುಣಪಡಿಸುವ ಬಲವನ್ನು ಕೊಡಲ್ಪಡಬಹುದು, ಆದರೆ ಆತನು ಪಾಪಗಳನ್ನು ಕ್ಷಮಿಸುವ ಅಧಿಕಾರಕೊಡಲ್ಪಟ್ಟಿದೆ ಎಂದು ಅದರ ಅರ್ಥವಲ್ಲ. ಯೇಸು ದೇವರ ದೈವೀಕ ಮಗನಂತೆ ಇದ್ದಾನೆ, ಯೇಸುವಿಗೆ ಇದನ್ನು ಹೇಳಲು, "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎನ್ನುವದು "ಎದ್ದು ನಡೆ" ಎನ್ನುವದು ಆತನಿಗೆ ಸುಲಭವಾಗಿತ್ತು ಎಂದು ಆತನನ್ನು ಟೀಕಿಸುವವರು ಅರ್ಥಮಾಡಿಕೊಳ್ಳಬೇಕಾಗಿತ್ತು ಆತನು ದೈಹಿಕವಾಗಿ ಮತ್ತು ಮಾನಸಿಕವಾಗಿಯೂ ಸ್ವಸ್ಥಮಾಡಲು ಬಲವನ್ನು ಹೊಂದಿದ್ದೇನೆ ಎಂದು ಆತನು ವಿವರಿಸುತ್ತಿದ್ದನು.

**ವಚನಗಳು 6, 7.** ಯಜಮಾನನು ತನ್ನ **ಅಧಿಕಾರವನ್ನು** ಸ್ವಾಭಾವಿಕ ಲೋಕದ ಮೇಲೆ ಮತ್ತು ಆತ್ಮೀಕ ಲೋಕದ ಮೇಲೆ ಇದೆ ಎಂದು ತೋರಿಸಿದನು, ಮತ್ತು ಇಲ್ಲಿ ಆತನು ನಿತ್ಯಲೋಕದಲ್ಲಿ ತನ್ನ ಅಧಿಕಾರವನ್ನು ತೋರಿಸಿದನು (7:28, 29; 8:9 ರ ಮೇಲಿನ ವ್ಯಾಖ್ಯಾನ ನೋಡಿರಿ). ಪರಲೋಕದಿಂದಾಗಲಿ ಇಲ್ಲವೆ **ಭೂಲೋಕದಲಿ ಪಾಪಗಳನ್ನು ಕ್ಷಮಿಸಲು** ಬಲವನ್ನು ಹೊಂದಿದನು. ಈ ಅಧಿಕಾರವು ಯೇಸುವಿಗೆ ಸ್ವಂತ ಆತನೇ ಮನುಷ್ಯ ಕುಮಾರನೆಂದು ಗೊತ್ತುಮಾಡಿಕೊಂಡಿದ್ದನು. ದಾನಿಯೇಲನ ಪ್ರವಾದನೆಯಲ್ಲಿ ದಾನಿಯೇಲನು 7:13, 14, ಹಿಂದಿನ ದಿನಗಳಲ್ಲಿ **ಮನುಷ್ಯಕುಮಾರನಿಗೆ** "ದೊರೆತನವು, ಘನತೆಯು, ರಾಜ್ಯವು" ಕೊಡೋಣವಾಗಿದ್ದವು.

ಪಾಪಗಳನ್ನು ಕ್ಷಮಿಸುವ ಅಧಿಕಾರವನ್ನು ದೃಢಪಡಿಸಲು, ಯೇಸು **ಪಾರ್ಶ್ವವಾಯು ಪೀಡಿತನಿಗೆ ನೋಡಿ - ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗು ಅಂದನು.** ಅವನನ್ನು ಹಾಸಿಗೆಯ ಮೇಲೆ ಎತ್ತಿಕೊಂಡು ಯೇಸುವಿನ ಬಳಿಗೆ ತೆಗೆದುಕೊಂಡು ಬಂದಿದ್ದರು (9:2); ಯೇಸು ಅವನಿಗೆ ನಿನ್ನ ಹಾಸಿಗೆ ಎತ್ತಿಕೊಂಡು ಮನೆಗೆ ಹೋಗು ಎಂದು ಹೇಳಿದನು. Mounce ರವರು ವಿವರಿಸುತ್ತಾರೆ, "ಯೇಸುವಿನ ಕಾಲದಲ್ಲಿ ಹೆಚ್ಚಿನ ಜನರು ಗಾದಿಗೆಯಂತಿರುವ ಮತ್ತೆ ದಿಂಬುಗಳನ್ನು ನೆಲದ ಮೇಲೆ ಹಾಸಿಕೊಂಡು ಮಲಗುತ್ತಿದ್ದರು. ಈ ಚಾಪೆ [NIV] ಹುಲ್ಲಿನಿಂದ ಮಾಡಿರುವದು ಅಥವಾ ರೋಗಿಗಳನ್ನು ಸಾಗಿಸುವ ಕೈಮಂಚವಾಗಿರಬಹುದು ಇದರಲ್ಲಿ ಯಾವುದೇ ತೊಂದರೆ ಇಲ್ಲದೆ ಸಾಗಿಸಬಹುದು."[15] ಅವನು ಯಾವುದೇ ಅನುಮಾನ ಮಾಡದೆ ಯೇಸುವಿನ ಆಜ್ಞೆಗೆ ವಿಧೇಯನಾಗಿ **ಅವನು ಎದ್ದು ಮನೆಗೆ ಹೋದನು.** ಇದರ ನಿಮಿತ್ತವಾಗಿ, ಯೇಸು ದೇಹವನ್ನು ಗುಣಪಡಿಸುವನು ಮತ್ತು ಆತ್ಮವನ್ನು ಗುಣಪಡಿಸುವನು ಎಂದು ದೃಢಪಡಸಿದನು.

**ವಚನ 8.** ಆ ಮನುಷ್ಯನು ಎದ್ದು ನಿಜವಾಗಿಯು ತನ್ನ ಹಾಸಿಗೆಯನ್ನು ಹೊತ್ತುಕೊಂಡು ತನ್ನ ಮನೆಗೆ ಹೋಗುದನ್ನು ನೋಡಿದ **ಜನರ ಗುಂಪು** ಆಶ್ಚರ್ಯಗೊಂಡರು. ಮಾರ್ಕ 2:12 ಹೇಳುತ್ತದೆ ಏನೆಂದರೆ, "ಅವನು ಎದ್ದು ಕೂಡಲೆ ತನ್ನ ಹಾಸಿಗೆಯನ್ನು ತೆಗೆದುಕೊಂಡು ಎಲ್ಲರ ಮುಂದೆ ಹೊರಟು ಹೋದನು." ಅದಕ್ಕೆ "ಜನರೆಲ್ಲರು ಬೆರರಗಾದರು." ಮತ್ತಾಯನು ಬರೆದಿದ್ದಾನೆ ಅವರು **ಭಯಪಟ್ಟರು.** ಇದಕ್ಕೆ ಗ್ರೀಕ್ ಕ್ರಿಯಾಪದ *phobeō* ಎನ್ನುವದನ್ನು ಉಪಯೋಗಿಸಲಾಗಿದೆ, ಇದು *phobos,* ಎನ್ನುವ ನಾಮ ಪದಕ್ಕೆ ಸಂಬಂಧಪಟ್ಟಿದೆ ಎನ್ನುವ ಶಬ್ದದಿಂದ ತೆಗೆದುಕೊಳ್ಳಲಾಗಿದೆ. ಇದೆ ಶಬ್ದವನ್ನು ಕೆಲವು ಸಾರಿ "ಭಯ" ಎಂದು ಭಾಷಾಂತರಮಾಡಲಾಗಿದೆ, ಕೆಲವು ಸಾರಿ ಹೊಸ ಒಡಂಬಡಿಕೆಯಲ್ಲಿ ಇದನ್ನು "ಪೂಜ್ಯ ಭಾವದ ಭಯ" ಎನ್ನುವಂತೆ ಉಪಯೋಗಿಸಲಾಗಿದೆ (ಲೂಕ 1:50; 18:2, 4; ಅಪೊಸ್ತಲರ ಕೃತ್ಯಗಳು 10:35; 13:16, 26; ರೋಮಾಪುರ 3:18; 2 ಕೊರಿಂಥವರಿಗೆ 5:11; 7:1; ಕೊಲಸ್ಸೆ 3:22; 1 ಪೇತ್ರ 1:17; 2:17; ಪ್ರಕಟಣೆ 11:18; 14:7; 19:5). **ದೇವರು ಮನುಷ್ಯರಿಗೆ ಅಂಥ ಅಧಿಕಾರವನ್ನು ಕೊಟ್ಟದ್ದಕ್ಕೆ ಆತನನ್ನು ಕೊಂಡಾಡಿದರು.** ಅವರು ಭಯಪಟ್ಟಿದ್ದರಿಂದಲೇ

ದೇವರನ್ನು ಕೊಂಡಾಡಿರಬಹುದೆಂದು ಹೊರಗಿನ ನೋಟಕ್ಕೆ ಕಾಣಿಸುತ್ತದೆ.

## ಪಾಠಗಳು

### "ಯೇಸು ಯಾರು?" (8:27)

ಯೇಸು ಸಮುದ್ರವನ್ನು ಶಾಂತಗೊಳಿಸಿದ ಮೇಲೆ, "ಶಿಷ್ಯರು ಬೆರಗಾಗಿ ಈತನು ಎಂಥವನಾಗಿರಬಹುದು; ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆಯೇ ಕೇಳುತ್ತವಲ್ಲಾ?" (8:27). ಮಾರ್ಕನ ಪ್ರಕಾರ, "ಈತನು ಯಾರಿರಬಹುದು ...?" ಎಂದು ಕೇಳಿದರು (ಮಾರ್ಕ 4:41; NLT ). ಸುವಾರ್ತೆಗಳಲ್ಲಿ, ಯೇಸುವಿನ ವ್ಯಕ್ತಿತ್ವದ ಪ್ರಶ್ನೆಗಳು ಮುಖ್ಯವಾದವುಗಳಾಗಿವೆ. ಆತನ ದೀಕ್ಷಾಸ್ನಾನದಲ್ಲಿ ಮತ್ತು ರೂಪಾಂತರ ಹೊಂದಿದಾಗಲೂ ತಂದೆಯಾದ ದೇವರು ಯೇಸುವನ್ನು ತನ್ನ ಮಗನೆಂದು ಹೇಳಿದ್ದಾನೆ (3:17; 17:5). ಸೈತಾನನು ಯೇಸುವನ್ನು ಉಪಯೋಗಿಸಿದನು (4:3, 6). ದೆವ್ವಗಳು ಸಹ ಆತನ ದೈವತ್ವವನ್ನು ಗುರುತಿಸಿವೆ (8:29). ಹೀಗಿರುವಾಗ, ಯೇಸುವಿನ ಗುರುತಿಸುವಿಕೆಯ ಕುರಿತು ಯೆಹೂದ್ಯ ಜನರ ಮಧ್ಯದಲ್ಲಿ ಚರ್ಚೆಯು ನಡೆಯಿತು (16:13, 14; ಮಾರ್ಕ 6:14-16; ಯೋಹಾನ 7:40-44). ಯೇಸುವಿನ ಸ್ವಂತ ಶಿಷ್ಯರು ಕೆಲವು ಸಾರಿ ಆತನು ನಿಜವಾಗಿಯೂ ಯಾರಾಗಿರಬಹುದು ಎಂದು ತಿಳಿದಿರಲಿಲ್ಲ. ಈ ವಿಷಯದ ಕುರಿತು ಯೇಸು ಅವರಿಗೆ ಕೇಳಿದಾಗ, ಪೇತ್ರನು ಉತ್ತಮವಾದ ರೀತಿಯಲ್ಲಿ "ನೀನು ಬರಬೇಕಾದ ಕ್ರಿಸ್ತನು ಜೀವಸ್ವರೂಪನಾದ ದೇವರ ಕುಮಾರನು" ಎಂದು ಉತ್ತರ ಕೊಟ್ಟನು (16:16). ಹೀಗಿದ್ದರೂ, ಆತನು ಪುನರುತ್ಥಾನಗೊಂಡರೂ ಕೆಲವು ಶಿಷ್ಯರು ಇನ್ನು ಸಂಶಯಪಡುತ್ತಿದ್ದರು (28:17).

"ಯೇಸು ಯಾರು?" ಎನ್ನುವ ಪ್ರಶ್ನೆ ಇಂದು ಒಬ್ಬನು ಉತ್ತರಿಸಬಹುದಾದ ಮುಖ್ಯವಾದ ಪ್ರಶ್ನೆಯಾಗಿದೆ. ಯೇಸು ದೇವಕುಮಾರನು, ಆತನೊಬ್ಬನೆ ನಿತ್ಯ ಜೀವಕ್ಕೆ ಮಾರ್ಗ ಎಂದು ತಾನೇ ತೋರಿಸಿಕೊಂಡಿದ್ದಾನೆ (ಯೋಹಾನ 14:6; ನೋಡಿರಿ ಅಪೊಸ್ತಲರ ಕೃತ್ಯಗಳು 4:12). ಆತನು ಇದನ್ನು ಸಹ ಹೇಳಿದ್ದಾನೆ, "ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ಹೇಳಿದನು" (ಯೋಹಾನ 8:24; NIV). ಮನುಷ್ಯನ ನಂಬಿಕೆಯ ಒಂದು ಭಾಗ ಉತ್ತಮ ರೀತಿಯಲ್ಲಿ ದೇವರಿಗೆ ಪ್ರತಿಕ್ರಿಯೆಗೆ ಒಪ್ಪಿಕೊಳ್ಳುವಂಥದ್ದು ಅದು ರಕ್ಷಣೆಗೆ ನಡಿಸುತ್ತದೆ (10:32, 33; ಅಪೊಸ್ತಲರ ಕೃತ್ಯಗಳು 8:37; ರೋಮಾಪುರ 10:9, 10; 1 ತಿಮೋಥೆ 6:12). ನಾವು ಹೇಗೆ ಯೇಸುವಿನ ಗುರುತಿಸುವಿಕೆ ಕುರಿತು ಇರುವ ಪ್ರಶ್ನೆಗೆ ಉತ್ತರಿಸುತ್ತೇವೆ ಅದು ನಮ್ಮ ಬಹುಶಃ ಗುರಿಯನ್ನು ನಿರ್ದರಿಸುತ್ತದೆ.

David Stewart

### ದೆವ್ವಗಳು (8:28-34)

ದೆವ್ವಗಳ ಮೂಲವನ್ನು ವಿವರಿಸಲು ಅನೇಕ ಸಲಹೆಗಳನ್ನು ಕೊಡಲ್ಪಟ್ಟಿದೆ. ಭೂಲೋಕ ದಲ್ಲಿ ಬೇಟೆಯಾಡಿದ ದುಷ್ಟ ಜನರ ಆತ್ಮಗಳು ಎಂದು ನಂಬಲಾಗಿದೆ. ಹೇಗಿದ್ದರೂ, ಒಬ್ಬ ವ್ಯಕ್ತಿ ಹಿಂತಿರುಗಿ ಬಂದು ಇನ್ನೊಬ್ಬನ ದೇಹದಲ್ಲಿ ವಾಸವಾಗಿರುವದು ಎಲ್ಲಿಯೂ ಕೂಡ ಒಂದು ಉದಾಹರಣೆ ಇಲ್ಲ. ಇತರರು ಸಹ ದೇವರು ಈ ದೆವ್ವಗಳನ್ನು ಸೃಷ್ಟಿಮಾಡಿ ದುಷ್ಟಕಾರ್ಯಗಳನ್ನು ಮಾಡುವದಕ್ಕೆ ಇಟ್ಟಿದ್ದಾನೆ ಎಂದು ಇವರು ನಂಬುತ್ತಾರೆ. ಈ ಅಂಶವು ಮಾತ್ರ ನಿರಾಕರಿಸಲ್ಪಡುತ್ತದೆ ಪ್ರಾರಂಭದಲ್ಲಿ ದೇವರು ಉಂಟುಮಾಡಿರುವದೆಲ್ಲವು "ಉತ್ತಮ" ವಾಗಿದೆ (ಆದಿಕಾಂಡ 1:31). ಬಹುಶಃ ಹೆಚ್ಚಿನ ತರ್ಕಶಾಸ್ತ್ರದ ಉತ್ತರ ಅವೆಲ್ಲವುಗಳು ಬೀಳುವ ದೂತರುಗಳೇ ಆಗಿದ್ದಾರೆ (2 ಪೇತ್ರ 2:4; ಯೂದ 6). ಅವರು ಸೈತಾನನ ನಾಯಕತ್ವದ ಅಧಿನದಲ್ಲಿದ್ದಾರೆ (12:24; 25:41; ಮಾರ್ಕ 3:22, 23).

ದೆವ್ವಗಳ ವಿಷಯದಲ್ಲಿ ಒಂದು ಮುಖ್ಯವಾದ ಅಭ್ಯಾಸವು ಅದೇನೆಂದರೆ ದೆವ್ವ ಹಿಡಿದರುವದು ಹೊಸ ಒಡಂಬಡಿಕೆಯಲ್ಲಿ ಮಾತ್ರ ಗೋಚರವಾಗುತ್ತದೆ. ಅಲ್ಲಿ "ದುರಾತ್ಮವು" ರಾಜನಾದ ಸೌಲನಿಗೆ ಪೀಡಿಸುತ್ತಿತ್ತು ಎಂದು ಸೂಚಿಸಲಾಗಿದೆ (1 ಸಮುವೇಲ 16:14-23). ಇದು ಏನೇ ಇರಲಿ, ಇದು ಹೊಸ ಒಡಂಬಡಿಕೆಯಲ್ಲಿರುವ ದೆವ್ವ ಹಿಡಿದಿರುವದಕ್ಕೆ ಸಂಪೂರ್ಣವಾಗಿ ಆ ದೃಶ್ಯರೂಪವೇ ವ್ಯತ್ಯಾಸವುಳ್ಳದ್ದಾಗಿದೆ. ಹಳೆ ಒಡಂಬಡಿಕೆಯಲ್ಲಿ ಒಂದು ದೆವ್ವ ಇನ್ನೊಬ್ಬನ ದೇಹವನ್ನು ನಿಯಂತ್ರಣದಲ್ಲಿಟ್ಟಿರುವದು ಒಂದು ಉದಾಹರಣೆ ಕೂಡ ಇಲ್ಲ.

ದೇವರು ದೆವ್ವಗಳಿಗೆ ಮನುಷ್ಯರ ದೇಹದಲ್ಲಿ ವಾಸ ಮಾಡಲು ಮಹತ್ಕಾರ್ಯಗಳು ನಡೆಯುವ ಕಾಲ ಮೊದಲನೆ ಶತಮಾನದಲ್ಲಿ ಅವಕಾಶ ಕೊಟ್ಟನು ಅಲ್ಲಿ ಸೈತಾನನ ಮೇಲೆ ತನ್ನ ಬಲವನ್ನು ಪ್ರಯೋಗಿಸಿದನು. ದೆವ್ವ ಹಿಡಿದಿರುವ ಸಂಗತಿಗಳು ಸುವಾರ್ತೆಗಳಲ್ಲಿ ಮತ್ತು ಅಪೊಸ್ತಲರ ಕೃತ್ಯಗಳಲ್ಲಿ ಬರೆಯಲಾಗಿದೆ, ಹೊಸ ಒಡಂಬಡಿಕೆಯ ಪತ್ರಿಕೆಗಳಲ್ಲಿ ತಿಳಿಸಿರುವದಿಲ್ಲ. ವಾದದಿಂದ ಕೂಡಿದ ಮುಕ್ತಾಯವೆನೆಂದರೆ ದೆವ್ವಗಳನ್ನು ಹೊಡಿಸುವ ಬಲ ಬಹಳ ದಿನಗಳವರೆಗೆ ಇರಲಿಲ್ಲ, ದೆವ್ವಗಳು ಮನುಷ್ಯರ ದೇಹದಲ್ಲಿ ಬಹಳ ದಿನಗಳ ವರೆಗೆ ವಾಸಮಾಡಲು ಅವಕಾಶ ಕೊಡಲಿಲ್ಲ.

ದೆವ್ವಬಿಡಿಸು ಇದರ ಅರ್ಥ "ಇಂದ್ರ ಜಾಲ ಬಿಡಿಸುವದು." *(exorkizō),* ಇದನ್ನು ಉಪಯೋಗಿಸಿ ದೆವ್ವಗಳನ್ನು ಹೊರಗಡೆ ಓಡಿಸಿರುವದು ಹೊಸ ಒಡಂಬಡಿಸಿಕೆಯಲ್ಲಿ ಸೂಚಿಸಿರುವದಿಲ್ಲ. ದೆವ್ವಗಳನ್ನು ಮನುಷ್ಯನಿಂದ ಹೊರಗೆ ಓಡಿಸಲು ಮಂತ್ರಯೋಗ ಮಾಟ ಆಚರಿಸುವ ಪದ್ಧತಿಯಾಗಿತ್ತು ಎಂದು ನಂಬಲಾಗಿದೆ. ದೆವ್ವ ಬಿಡಿಸುವವರು ಇಂದು ಅನೇಕ ನಕಲಿ ಕಾರ್ಯಗಳನ್ನು ಮಾಡಿ ಹಣ ವಿಷಯದಲ್ಲಿ ಅಲಕ್ಷವಿರುವವರನ್ನು ಮತ್ತು ಸಂಶಯ ಪಡದವರಿಗೆ ಇವರು ಮೋಸ ಮಾಡುತ್ತಾರೆ.

ಇಂದು ಸಹ ದೆವ್ವಗಳು ಮನುಷ್ಯರ ದೇಹದಲ್ಲಿ ಇದನ್ನು ವಾಸ ಮಾಡುತ್ತಿದ್ದನು ಎಂದು ಕೆಲವರು ನಂಬುತ್ತಿದ್ದಾರೆ. Lynn A. McMillon ರವರು ವಿವರಿಸಿದ್ದಾರೆ,

> ದೆವ್ವಗಳ ಸ್ವಾದೀನತೆಯ ವಿಷಯದಲ್ಲಿ ಕೆಲವು ಸಾರಿ ಪಂಗಡಗಳಲ್ಲಿ ಸೇವೆ ಮಾಡುವ ಸೇವಕರುಗಳಿಂದ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿರುವ ದೇಶಗಳಲ್ಲಿ ಸಾಮಾಜಿಕ ತಜ್ಞರು ಪರೀಕ್ಷೆ ಮಾಡಿ ವರದಿ ಕೊಡುತ್ತಾರೆ. ಈ ಸ್ವಾದೀನತೆಯ ಕಥೆಗಳು ಸಾಮಾನ್ಯವಾಗಿ ದೂರ ಇರುವ ದೇಶಗಳಿಂದ China, India, Borneo, ಮತ್ತು Africa. ಈ ದೇಶಗಳಿಂದಲೇ ಬರುತ್ತವೆ. ಸಾಮಾಜಿಕ ಮಾನಸಿಕ ತಜ್ಞರು ಗಮನಿಸಿದಂತೆ ದೆವ್ವಗಳ ಸ್ವಾದೀನತೆಯಂತಹ ಘಟನೆಗಳು ಕ್ರಮವಾಗಿ ಎಲ್ಲಿ ನಾಗರೀಕತೆ ಮಟ್ಟು ಹೆಚ್ಚುತ್ತದೊ ಮತ್ತು ಶೈಕ್ಷಣಿಕ ಮಟ್ಟ ಹೆಚ್ಚುತ್ತದೋ ಅಲ್ಲಿ ಈ ಘಟನೆಗಳು ಇಳಿಮುಖವಾಗುತ್ತವೆ ಅದರಿಂದ ಎಲ್ಲಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಮಟ್ಟ ಇಳಿಮುಖವಾ ಗಿರುತ್ತದೊ ಅಂಥಹ ಕ್ಷೇತ್ರಗಳಲ್ಲಿ ಹೆಚ್ಚಾಗಿ ಇಂಥಹ ಘಟನೆಗಳನ್ನು ನೋಡುತ್ತೇವೆ. ಹೆಚ್ಚಿನ ತಂತ್ರಜ್ಞಾನ ಮುಂದುವರಿದ ಸಮಾಜದಲ್ಲಿ ಈ ಘಟನೆಗಳು ಕಂಡು ಬರುವದಿಲ್ಲ. ಯಾವ ಕ್ಷರದಲ್ಲಿ ದೆವ್ವಗಳ ಸ್ವಾದೀನತೆಯನ್ನು ಅಂಗಿಕರಿಸಿವೆಯೋ ಅವರು ಬೇರೆ ಬೇರೆ ಉಪಾಯ ಯುಕ್ತಿಯ ನಡತೆಯಿಂದ ಅದನ್ನು ವಿವರಿಸುವವರಾಗಿದ್ದಾರೆ. ಈ ಅಂಶವು ಸಾಂಸ್ಕೃತಿಕ ಪರಿಸರವನ್ನು ಸ್ಥಾಪಿಸಲು ಸಹಾಯಮಾಡುತ್ತದೆ ಇದು "ಸ್ವಾದೀನತೆಯನ್ನು" ಉತ್ಪಾದಿಸುವದಕ್ಕೆ ಮತ್ತು ಈ ಸ್ವಾದೀನಗಳಲ್ಲಿ ನಂಬಿಕೆಯನ್ನು ಉತ್ಪಾದಿಸುವ ಜವಾಬ್ದಾರಿಯು ಈ ಅಂಶಕ್ಕೆ ಇರುತ್ತದೆ.[16]

ಇಂದಿನ ದಿನಗಳಲ್ಲಿ ಮನುಷ್ಯರ ದೇಹಗಳಲ್ಲಿ ದೆವ್ವಗಳು ವಾಸಮಾಡಲು ಅವಕಾಶವಿಲ್ಲ. ಆದಾಗ್ಯೂ ಅವುಗಳ ಪ್ರಭಾವವು ಈ ಲೋಕದಲ್ಲಿರುವದು ಸ್ಪಷ್ಟವಾಗಿದೆ, ಮತ್ತು ಅದನ್ನು ತಡೆಗಟ್ಟಲೆ ಬೇಕು (ಯಾಕೋಬ 4:7, 8).

## ರಕ್ಷಿಸುವ ನಂಬಿಕೆ (8:29)

ದೆವ್ವಗಳು ಯೇಸು ದೇವರ ಮಗನೆಂದು ಸರಳವಾಗಿ ಒಪ್ಪಿಕೊಂಡವು (8:29). ಅವುಗಳ ಹೇಳಿಕೆಯು ಖಚಿತವಲ್ಲದ ಹೇಳಿಕೆಯಾಗಿರಲಿಲ್ಲ. ಇದು ಸತ್ಯವೇದದ ಆಧಾರವಾಗಿದೆ ನಂಬಿಕೆಮಾತ್ರ ರಕ್ಷಣೆ ಹೊಂದಲು ಸಾಕಾಗುವದಿಲ್ಲ. ಸತ್ತು ಹೋಗಿರುವ ಮತ್ತು ಕ್ರಿಯೆಗಳಿಲ್ಲದ ನಂಬಿಕೆ ನಮ್ಮನ್ನು ರಕ್ಷಿಸುವದಿಲ್ಲ. ಯಾಕೋಬನು "ಸತ್ತ" ನಂಬಿಕೆ, ಕುರಿತು ಚರ್ಚಿಸುವಾಗ, ಆತನು ಈ ಹೇಳಿಕೆಯನ್ನು ಕೊಟ್ಟಿದ್ದಾನೆ: "ದೇವರು ಒಬ್ಬನೇ ಎಂದು ನೀನು ನಂಬುವವನು. ಹಾಗೇ ನಂಬುವದು ಒಳ್ಳೆದು. ದೆವ್ವಗಳು ಕೂಡ ಹಾಗೆಯೇ ನಂಬಿ ಹೆದರಿ ನಡುಗುತ್ತವೆ" (ಯಾಕೋಬ 2:17, 19).

## ನಮ್ಮ ಶ್ರೇಷ್ಠ ಅಗತ್ಯತೆ (9:1-8)

ಕೆಲವು ಸಾರಿ ಹೀಗೆ ಹೇಳಲ್ಪಟ್ಟಿದೆ ನಾವು ಜನರಿಗೆ ಆತ್ಮೀಕವಾಗಿ ಸೇವೆ ಮಾಡುವ ಮೊದಲು ನಾವು ಅವರ ಶಾರೀರಿಕ ಅಗತ್ಯಗಳ ಬಗ್ಗೆ ಕಾಳಜಿ ವಹಿಸಬೇಕು. ಜನರು ಒಂದು ವೇಳೆ ಆಹಾರ, ಬಟ್ಟೆ, ಮನೆ, ಮತ್ತು ಇತರೆ ಮೂಲಭೂತ ಸೌಕರ್ಯಗಳ ಕೊರತೆ ಅವರ ಜೀವನದಲ್ಲಿ ಇದ್ದಿದ್ದಿಯಾದರೆ ಅವರು ಆತ್ಮೀಕ ವಿಷಯಗಳ ಕುರಿತು ಯೋಚಿಸುವದು ಕಷ್ಟಕರವಾದ ಸಂಗತಿಯಾಗಿದೆ. ಇದು ಒಂದು ಉತ್ತಮವಾದ ಅಭಿಪ್ರಾಯವಾಗಿರಬಹುದು, ನಾವು ಕೆಲವು ಸಾರಿ ಅವರಿಗೆ ಸಹಾಯ ಮಾಡಲು ಪ್ರಯತ್ನಿಸುವಾಗ ಕಳೆದ ಭೌತಿಕ ಮಟ್ಟದ ಎಲ್ಲಾ ಸಹಾಯ ಮಾಡಲು ಆಗದೆ ಇರಬಹುದು. ಹೀಗಿರುವಾಗಲೂ, ಈ ಕಡೆಯಲ್ಲಿ ಯೇಸು ಪಾರ್ಶ್ವವಾಯುರೋಗಿಗೆ ಮೊದಲು ಆತ್ಮೀಕ ಅವಶ್ಯಕತೆಗಳನ್ನು ನೋಡಿದರು. ಆತನು ಆ ವ್ಯಕ್ತಿಯ ಪಾಪಗಳನ್ನು ಕ್ಷಮಿಸಿದನು. ತರುವಾಯ ಅವನ ಪಾರ್ಶ್ವವಾಯುವನ್ನು ಗುಣಪಡಿಸಿದನು. ನಮ್ಮ ಅಗತ್ಯತೆ ದೇವರೊಂದಿಗೆ ಪುನಃ ಸ್ಥಾಪಿಸುವದು ಮುಖ್ಯವಾಗಿದೆ ಅದು ಯಾವುದೇ ಶಾರಿರೀಕ ಅಗತ್ಯತೆಯನ್ನು ಮೀರಿಸುತ್ತದೆ ಯಾಕೆಂದರೆ ಇದು ನಿತ್ಯ ಜೀವದ ಕುರಿತಾಗಿ ಸ್ಪರ್ಶಿಸುತ್ತದೆ.

David Stewart

---

ಟಿಪ್ಪಣೆಗಳು

[1]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 78. [2]Matthew Henry, *Commentary on the Whole Bible* (Grand Rapids, Mich.: Zondervan Publishing House, 1960), 1243. [3]D. A. Carson, *When Jesus Confronts the World: An Exposition of Matthew 8—10* (Grand Rapids, Mich.: Baker Book House, 1987), 50. [4]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 129. [5]NIV ಯಲ್ಲಿ ಪ್ರತಿಯೊಂದು ವಾಕ್ಯ ಅಡಿ ಟಿಪ್ಪಣೆಗಳನ್ನು ಒಳಗೊಂಡಿದೆ - ಮತ್ತಾಯ 8:28; ಮಾರ್ಕ 5:1; ಮತ್ತು ಲೂಕ 8:26 - ಇನ್ನು ಎರಡು ಸ್ಥಳಗಳ ಹೆಸರುಗಳನ್ನು ಸೂಚಿಸಲಾಗಿದೆ. [6]Josephus *Life* 9.42. [7]ನೋಡಿರಿ Vassilios Tzaferis, "A Pilgrimage to the Site of the Swine Miracle," *Biblical Archaeology Review* 15 (March-April 1989): 44—51. [8]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 208. [9]Josephus *Wars* 3.3.5. [10]Mishnah *Baba Kamma* 7.7.

[11]Donald A. Hagner, *Matthew 1—13,* Word Biblical Commentary, vol. 33A

(Dallas: Word Books, 1993), 227. [12]ನೋಡಿರಿ Talmud *Shabbath* 55a; Mishnah *Sotah* 1.7, 8. [13]Talmud *Nedarim* 41a. [14]Morris, 216. [15]Mounce, 82. [16]Lynn A. McMillon, *Doctrines of Demons* (Nashville: Gospel Advocate Co., 1975), 98.